ದೆಹಲಿ ಕರ್ನಾಟಕ ಸಂಘದ

# ಅಭಿಮತ

ಜೂನ್ 2018
ಬೆಲೆ ರೂ. 1




## ರಾಜ್ಯದ ನೂತನ ಮುಖ್ಯಮಂತ್ರಿ

## ಶ್ರೀ ಹೆಚ್.ಡಿ. ಕುಮಾರಸ್ವಾಮಿ

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 28 ಸಂಚಿಕೆ 9
ಜೂನ್ 2018, ಬೆಲೆ ರೂ. 1

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ:
9958697823

**ಉಪಾಧ್ಯಕ್ಷರು**
ಆಶಾಲತಾ ಎಂ.:
9891249149
ಎಸ್.ಸಿ. ಹೇಮಲತ:
9971121636

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ:
9811325440

**ಕೋಶಾಧಿಕಾರಿ**
ಕೆ.ಎಸ್.ಜಿ. ಶೆಟ್ಟಿ
9810232113

**ಜಂಟಿ ಕಾರ್ಯದರ್ಶಿಗಳು**
ಟಿ.ಪಿ. ಬೆಳ್ಳಿಯಪ್ಪ:
9654555795
ಜಮುನಾ ಸಿ. ಮಠದ:
9717146597

**ಸಮಿತಿ ಸದಸ್ಯರು**
ಡಾ. ಎಂ.ಎಸ್. ಶಶಿಕುಮಾರ್:
9811689337
ರಾಧಾಕೃಷ್ಣ:
9818252183
ಪೂಜಾ ಪಿ. ರಾವ್:
9810882498
ವಿ.ವಿ.ಬಿರಾದಾರ:
9873005409
ಸಖಾರಾಮ ಉಪ್ಪೂರು
8447288475
ಸುಮಿತಾ ಮುರಗೋಡ
9873000333
ಶಶಿಕಾಂತ್ ಪಾಟೀಲ್
9650182413
ಬಾಬುರಾಜ್ ಪೂಜಾರಿ
9818807696
ತ್ಯಾಗೇಶ್ ಮೂರ್ತಿ
9868393961
ಸಂತೋಷ್ ಜೆ.
9911235783

**ವಿಶೇಷ ಆಹ್ವಾನಿತರು**
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಎನ್.ಎಂ. ಸರೋಜ
ರಾಧಾ ಕೌಜಲಗಿ
ಎಂ. ಶಿವರಾಮ ರೈ
ಪಿ. ರಾಜಣ್ಣ

**ಕಾವಲು ಸಮಿತಿ**
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ

## ನೇರ ಮಾತು

ಕರ್ನಾಟಕದ ಚುನಾವಣೆ ನಡೆದು ಕೊನೆಗೂ ಸರಕಾರವೊಂದು ಅಸ್ತಿತ್ವಕ್ಕೆ ಬಂದಿದೆ. ಮಾನ್ಯ ಹೆಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಸಂಪೂರ್ಣ ಬಹುಮತವಿದ್ದರೂ ಸರಕಾರವನ್ನು ನಡೆಸುವುದು ಕಷ್ಟವಾಗಿರುವ ಈ ಸಂದರ್ಭದಲ್ಲಿ ಸಮ್ಮಿಶ್ರ ಸರಕಾರವನ್ನು ನಡೆಸುವುದು ಸುಲಭದ ಕೆಲಸವಲ್ಲ. ರಾಜ್ಯದ ಸಾವಿರಾರು ಸಮಸ್ಯೆಗಳ ಮಧ್ಯೆ, ರಾಜಕೀಯ ಸಮಸ್ಯೆಗಳಿಗೂ ಸ್ಪಂದಿಸಬೇಕಾದ ಅನಿವಾರ್ಯ ಪರಿಸ್ಥಿತಿಯಲ್ಲಿ ನೂತನ ಸರಕಾರವಿದೆ. ಈ ಸ್ಥಿತಿಯಲ್ಲಿ ಸರಕಾರ 'ಕನ್ನಡ'ದ ಬಗ್ಗೆ ಯಾವ ರೀತಿಯ ನಿಲುವು ತಾಳುತ್ತದೆ ಎನ್ನುವುದು ನನ್ನಂತಹ ಕನ್ನಡದ ಸ್ವಯಂಸೇವಕನ ಕುತೂಹಲ. ಇದರೊಂದಿಗೆ ಕನ್ನಡಕ್ಕೆ ಸ್ಪಂದಿಸುವ ಅಗತ್ಯ ಕೆಲಸಗಳನ್ನು ಮಾಡಬಹುದೆಂಬ ನಿರೀಕ್ಷೆ ಮತ್ತು ಆಶಯವೂ ನನಗಿದೆ.

ಈಗಾಗಲೇ ಕರ್ನಾಟಕ, ರಾಜಕೀಯವಾಗಿ ರಾಷ್ಟ್ರಮಟ್ಟದಲ್ಲಿ ಸುದ್ದಿ ಮಾಡಿದೆ. ಈ ಹಿಂದೆ ಶ್ರೀ ಹೆಚ್.ಡಿ. ದೇವೇಗೌಡರು ಪ್ರಧಾನಿಯಾಗುವ ಮೂಲಕ ಕರ್ನಾಟಕದ ಹೆಸರು ರಾಷ್ಟ್ರಮಟ್ಟದಲ್ಲಿ ಮುನ್ನೆಲೆಗೆ ಬಂದಿತ್ತು. ಇದಕ್ಕೂ ಮೊದಲು 1980ರ ದಶಕದಲ್ಲಿ ದಿ. ರಾಮಕೃಷ್ಣ ಹೆಗಡೆಯವರು ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ಕರ್ನಾಟಕ ಎನ್ನುವ ರಾಜ್ಯವೂ ಒಂದಿದೆ ಎಂಬುದು ಉತ್ತರ ಭಾರತೀಯರಿಗೆ ಗೊತ್ತಾದದ್ದು. ಇದಕ್ಕೆ ಮೊದಲು ದೆಹಲಿ ಕನ್ನಡಿಗರನ್ನು 'ಮದ್ರಾಸಿ'ಗಳೆಂದೇ ಪರಿಗಣಿಸುತ್ತಿದ್ದರು. ನಾವೆಲ್ಲಾ ಮದ್ರಾಸ್ ರಾಜ್ಯಕ್ಕೆ ಸೇರಿದವರು ಎಂಬುದು ಅವರ ತಿಳುವಳಿಕೆಯಾಗಿತ್ತು. ನಂತರ ರಾಷ್ಟ್ರಮಟ್ಟದಲ್ಲಿ ರಾಜಕೀಯವಾಗಿ ಗುರುತಿಸಲ್ಪಟ್ಟವರು ಮಾನ್ಯ ಸಿದ್ದರಾಮಯ್ಯನವರು. ಇದೀಗ ಮುಖ್ಯಮಂತ್ರಿಯಾಗುವ ಮೂಲಕ ಹೆಚ್.ಡಿ. ಕುಮಾರಸ್ವಾಮಿಯವರು ಕೂಡ ರಾಜಕೀಯ ಸುದ್ದಿಯ ಕೇಂದ್ರ ಬಿಂದುವಾಗಿದ್ದಾರೆ. ಇಂದು ರಾಜಕೀಯವಾಗಿ ಇಡೀ ದೇಶದ ದೃಷ್ಟಿ ಕರ್ನಾಟಕದತ್ತ ಇದೆ. ಮುಂದಿನ ದಿನಗಳಲ್ಲಿ ನಮ್ಮ ಕರ್ನಾಟಕ ಸರಕಾರ ಅತ್ಯುತ್ತಮ ಜನೋಪಯೋಗಿ ಕೆಲಸ ಕಾರ್ಯಗಳನ್ನು ಮಾಡಿ ತೋರಿಸುವ ಮೂಲಕ 'ಕರ್ನಾಟಕ' ದೇಶಕ್ಕೆ ಮಾದರಿಯಾಗಲಿ ಎಂದು ಆಶಿಸುತ್ತೇವೆ.

ಈ ಹಿಂದಿನ ಎಲ್ಲಾ ಸರಕಾರಗಳೂ ಕರ್ನಾಟಕ ಸಂಘದ ಬೇಡಿಕೆಗೆ ಸ್ಪಂದಿಸಿ ಸಕರಾತ್ಮಕವಾದ ಸಹಕಾರವನ್ನು ನೀಡಿದೆ, ಮುಂದೆಯೂ ಇನ್ನೂ ಹೆಚ್ಚಿನ ಸಹಕಾರದ ನಿರೀಕ್ಷೆಯಲ್ಲಿ ನಾವಿದ್ದೇವೆ. ಆ ಮೂಲಕ ರಾಜಧಾನಿ ದೆಹಲಿಯಲ್ಲಿ ಕರ್ನಾಟಕವನ್ನು ಸಾಂಸ್ಕೃತಿಕವಾಗಿ ವ್ಯವಸ್ಥಿತ ರೀತಿಯಲ್ಲಿ ಪ್ರತಿನಿಧಿಸುವ ಕಾರ್ಯವನ್ನು ಗಟ್ಟಿಗೊಳಿಸಬಹುದಾಗಿದೆ. ಹಲವು ವರ್ಷಗಳಿಂದ ದೆಹಲಿಯಲ್ಲೇ ಇದ್ದು ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳ ವಿವಿಧ ಇಲಾಖೆಗಳ ಆಗು ಹೋಗುಗಳನ್ನು ಬಲ್ಲವರೊಬ್ಬರನ್ನು ದೆಹಲಿಯಲ್ಲಿ ಸರಕಾರದ ವಿಶೇಷ ಪ್ರತಿನಿಧಿಯಾಗಿ ನೇಮಿಸಿದರೆ ರಾಜ್ಯಕ್ಕೆ ಹೆಚ್ಚಿನ ಅನುದಾನ ತರಲು ಮತ್ತು ಅನುಷ್ಠಾನಗೊಳಿಸಲು ಸಹಕಾರಿಯಾದೀತು. ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಮನ್ನಣೆ ಸಿಕ್ಕಿದೆಯಾದರೂ ಅದರ ಲಾಭವನ್ನು ಪಡೆಯಲು ಅಥವಾ ಅನುಷ್ಠಾನಗೊಳಿಸಲು ನಾವು ವಿಫಲರಾಗಿದ್ದೇವೆ. ಇದಕ್ಕಾಗಿಯೇ ಒಂದು ವಿಶೇಷ ವಿಭಾಗ ರಚನೆಯಾಗಬೇಕು. ಈ ವಿಭಾಗ ಹೊರರಾಜ್ಯ ಮತ್ತು ವಿದೇಶಗಳಲ್ಲಿ ಕನ್ನಡದ ಮತ್ತು ಕರ್ನಾಟಕದ ಸಾಂಸ್ಕೃತಿಕ ಹಿರಿಮೆಯನ್ನು ತಿಳಿಸಲು ಪೂರಕವಾಗುವ ಕೆಲಸ ಮಾಡುವಂತಾಗಬೇಕು.

ಈ ಬಾರಿಯು ಶೈಕ್ಷಣಿಕ ವರ್ಷದಲ್ಲಿ ನಮ್ಮ ಕನ್ನಡದ ಮಕ್ಕಳು ಹಲವು ಸಾಧನೆಗಳನ್ನು ಮಾಡಿದ್ದಾರೆ ಅವರಿಗೆಲ್ಲಾ ದೆಹಲಿ ಕರ್ನಾಟಕ ಸಂಘದ ಅಭಿನಂದನೆಗಳು. ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***



ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ.
ಫೋನ್ :
011–26109615 / 26104818

## ಮುನ್ನೋಟ

ಕರ್ನಾಟಕದಲ್ಲಿ ಈಗಾಗಲೇ ಚುನಾವಣೆ ಮುಗಿದಿದೆ, ಆರಿಸಿ ಬಂದ ಎಲ್ಲಾ ಶಾಸಕರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು. ಈ ಎಲ್ಲಾ ಶಾಸಕರು ಜನ ನಾಯಕರಾಗದೆ, ಜನ ಸೇವಕರು ಆಗಿ ಸೇವೆ ಸಲ್ಲಿಸಲಿ ಎಂದು ಆಶಿಸುತ್ತಿದ್ದೇನೆ.

ರಾಜ್ಯದ ಜನಪ್ರಿಯ ನಾಯಕರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಇವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು. ಜೊತೆಗೆ ನೂತನ ಸಚಿವ ಸಂಪುಟ ವಿಸ್ತರಣೆ ಕಾರ್ಯವು ನಡೆಯುತ್ತಿದ್ದು, ದೆಹಲಿ ಕರ್ನಾಟಕ ಸಂಘದ ಜೊತೆ ನಿಕಟವಾಗಿ ಸಂಪರ್ಕ ಹಾಗೂ ಸಹಾಯವಾಗಿ ನಿಲ್ಲುವ ನಾಲ್ಕು ಶಾಸಕರು ಮಂತ್ರಿಗಳಾಗುತ್ತಿದ್ದಾರೆ, ಇವರಿಗೂ ಕೂಡಾ ಅಭಿನಂದನೆಗಳು. ಯಾರೇ ಬರಲಿ, ಪಕ್ಷಬೇಧವಿಲ್ಲದೆ ಎಲ್ಲಾ ಪಕ್ಷಗಳು ದೆಹಲಿ ಕರ್ನಾಟಕ ಸಂಘಕ್ಕೆ ಸಂಪೂರ್ಣ ಸಹಕಾರ ನೀಡುತ್ತಾ ಬಂದಿದೆ. ನಾವು ಎಲ್ಲಾ ರಾಜಕೀಯವನ್ನು ಮರೆತು ಮಂತ್ರಿಗಳಿಂದ ಸಹಕಾರ ಕೋರೋಣ.


ದೆಹಲಿಯಲ್ಲಿ ಬಿಸಿಲು ಜಾಸ್ತಿ ಆಗಿದೆ. ಸಾಮಾನ್ಯವಾಗಿ ಜೂನ್ ತಿಂಗಳಲ್ಲಿ ಎಲ್ಲಾ ಮಕ್ಕಳು ರಜೆಯಲ್ಲಿ ತಮ್ಮ ತಾಯ್ನಾಡಿಗೆ ತೆರಳಿರುತ್ತಾರೆ. ಬೆಂಗಳೂರಿನಲ್ಲಿ ದೆಹಲಿ ಕರ್ನಾಟಕ ಸಂಘ ಪ್ರಕಟಿತ 'ನಿರಂಜನ ಕೃತಿ ಸ್ಮೃತಿ ನಿರಂಜನ ನೀಲಾಂಜನ' ಕೃತಿ ಬಿಡುಗಡೆ ಕಾರ್ಯಕ್ರಮ ನಡೆಯಲಿದೆ. ಅ

*ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ*

## ದೆಹಲಿ ಕರ್ನಾಟಕ ಸಂಘದಲ್ಲಿ ತಿಂಗಳ ಕಾರ್ಯಕ್ರಮ

**ದೆಹಲಿ ಕರ್ನಾಟಕ ಸಂಘ**

ರಾವ್ ತುಲಾರಾಮ್ ಮಾರ್ಗ, ಸೆಕ್ಟರ್-12, ಆರ್.ಕೆ. ಪುರಂ, ನವದೆಹಲಿ-110022



**ನಿರಂಜನ ಕೃತಿ ಸ್ಮೃತಿ**
**ನಿರಂಜನ ನೀಲಾಂಜನ**

**ಕೃತಿ**
**ಬೆಂಗಳೂರಿನಲ್ಲಿ**
**ಶೀಘ್ರದಲ್ಲೇ ಬಿಡುಗಡೆ**

ವಸಂತ ಶೆಟ್ಟಿ ಬೆಳ್ಳಾರೆ
ಅಧ್ಯಕ್ಷರು

ಸಿ.ಎಂ. ನಾಗರಾಜ
ಪ್ರಧಾನ ಕಾರ್ಯದರ್ಶಿ

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್,** MBBS, MS (AIIMS), ONCO-SURGERY (IRCH, AIIMS) ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 17 ಜೂನ್, 2018ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ** B.A.M.S., Msc, Yoga Therapy ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 17 ಜೂನ್, 2018ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ** MS, FNB, Spine Surgeon, ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 24 ಜೂನ್, 2018ರಂದು ಬೆಳಿಗ್ಗೆ 11 ಗಂಟೆಯಿಂದ

**ಡಾ. ಭೀಮ್ ಭಟ್** M.D. (AYU) ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 24 ಜೂನ್, 2018ರಂದು ಸಾಯಂಕಾಲ 4 ಗಂಟೆಯಿಂದ.

## ದೆಹಲಿ ಕರ್ನಾಟಕ ಸಂಘದ- ಪ್ರಕಟಣೆಗಳು

- ದೆಹಲಿ ಕನ್ನಡ ಸಂಪುಟ
- ಸಿಡಿಲಿನ ಬಡಿತ ಹಾಗೂ ಏನಿದೆ ಈ ಮುದುಕನ ಗುಟ್ಟು?
- ರಾಜಧಾನಿಯಲ್ಲಿ ಕರ್ನಾಟಕ
- ಜರ್ನಿ ಟು ವಾರ್ಧಾ-ಇಂಗ್ಲಿಷ್
- ಕಿತ್ತೂರಿನ ಕೆಚ್ಚೆದೆಯ ಚೆನ್ನಮ್ಮ ರಾಣಿ-ನಾಟಕ
- ದೇವರು ಎದ್ದು ಬಂದಾಗ-ನಾಟಕ
- ನಾನು-ನೀನು ಕವನ ಸಂಕಲನ
- ರಂಗಿನೋಕುಳಿ-ಕವನ ಸಂಕಲನ
- ನಮ್ಮಿಬ್ಬರ ನಡುವೆ-ಕವಿತೆಗಳು
- ಅಕವಿತೆ-ಕವನ ಸಂಕಲನ

ಅಭಿಮತ ಪ್ರಧಾನ ಸಂಪಾದಕರು
ಬಾಲಕೃಷ್ಣ ನಾಯ್ಕ್ ಡಿ.

ಅಭಿಮತ ಸಂಪಾದಕ ಮಂಡಳಿ
ಸಖಾರಾಮ ಉಪ್ಪೂರು, ಚಂದ್ರಶೇಖರ್ ಎನ್.ಪಿ., ಎಸ್. ಕುಮಾರ್

ಸಂಪುಟ 28 ಸಂಚಿಕೆ 9
ಜೂನ್ 2018

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

## ಸಂಪಾದಕರ ಟಿಪ್ಪಣಿಗಳು

# ಬದುಕು ಪ್ಲಾಸ್ಟಿಕ್ ಮುಕ್ತವಾಗಿರಲಿ

ನಮ್ಮ ನಾಗರೀಕತೆಯ ಪಳೆಯುಳಿಕೆಗಳು ಸಾವಿರಾರು ವರ್ಷಗಳಾದರೂ ಉಳಿದುಕೊಂಡಿವೆ. ಐದು ಸಾವಿರ ವರ್ಷಗಳಷ್ಟು ಹಿಂದಿನ ಮಾನವ ನಾಗರೀಕತೆಯ ಅವಶೇಷಗಳು ಇಂದು ಕೂಡಾ ಮೊಹೆಂಜೋದಾರೋ, ಹರಪ್ಪಾ ಮೊದಲಾದೆಡೆ ಕಾಣ ಸಿಗುತ್ತವೆ. ಮಣ್ಣಿನ ಗಡಿಗೆಗಳು, ಕೆತ್ತಿಕೊಂಡ ಚಿತ್ರಗಳು, ಉಪಯೋಗಿಸುತ್ತಿದ್ದ ಸಲಕರಣೆಗಳು ಮೊದಲಾದ ಹಲವು ಅವಶೇಷಗಳು ಅಂದಿನ ಜನಜೀವನದ ಪರಿಯನ್ನು ವಿವರಿಸುತ್ತವೆ. ಸಾವಿರಾರು ವರ್ಷಗಳ ನಂತರವೂ ಅವುಗಳು ನಮಗೆ ದೊರೆಯಲು ಕಾರಣ ಅವು ನಶಿಸದಿರುವುದಾಗಿದೆ. ಆದರೆ ಅವೆಲ್ಲವೂ ನೈಸರ್ಗಿಕ ಮೂಲದವುಗಳಾಗಿವೆ. ಆದರೆ ಇಂತಹ ಮುಂದಿನ ಸಾವಿರಾರು ವರ್ಷಗಳವರೆಗೆ ನಶಿಸದ ಪಳೆಯುಳಿಕೆಯನ್ನು ನಮ್ಮ ಇಂದಿನ ಮಾನವ ನಾಗರಿಕತೆಯು ಬಿಟ್ಟು ಹೋಗುವ ಪ್ರಕ್ರಿಯೆಯು ಈಗಾಗಲೇ ನಡೆದಿದೆ. ಸುಮಾರು ಐವತ್ತು ವರ್ಷಗಳಿಂದ ನಮ್ಮ ಆಧುನಿಕ ಬದುಕಿನಲ್ಲಿ ಹಾಸುಹೊಕ್ಕಾಗಿ ಬಂದಿರುವ ಪ್ಲಾಸ್ಟಿಕ್ ಮುಂದೆ ಸಾವಿರಾರು ವರ್ಷ ಕಳೆದರೂ ಈ ಭೂಮಿಯಿಂದ ಮಾತ್ರವಲ್ಲ ಸಾಗರದ ತಟದಿಂದಲೂ ಅಳಿಯದೇ ಉಳಿಯುವುದು. ಈಗಾಗಲೇ ನಾವು ಮಾಡಬಾರದ ಅಧ್ವಾನವನ್ನು ಮಾಡಿಯಾಗಿದೆ. ನಮ್ಮ ಅನುಕೂಲಕ್ಕಾಗಿ ಒಮ್ಮೆ ಉಪಯೋಗಿಸಿ ಎಸೆಯುವ ಪ್ಲಾಸ್ಟಿಕ್ ಸಾಮಾಗ್ರಿಗಳಿಲ್ಲದೇ ನಾವು ನಮ್ಮ ದಿನದ ಬದುಕನ್ನು ನಡೆಸಲು ಅಸಮರ್ಥರಾಗುತ್ತಿದ್ದೇವೆ. ಹಲ್ಲುಜ್ಜಲು ಉಪಯೋಗಿಸುವ ಬ್ರಶ್‌ನಿಂದ ತೊಡಗಿ ಕುಡಿಯಲು ನೀರಿಡುವ ಬಾಟಲಿಯವರೆಗೆ ಪ್ಲಾಸ್ಟಿಕ್ ಬೇಕೇ ಬೇಕು. ಎಲ್ಲದಕ್ಕೂ ಬಳಸಲಾಗುವಂತೆ ನಾವು ಪ್ಲಾಸ್ಟಿಕನ್ನು ತಯಾರು ಮಾಡುತ್ತಿದ್ದೇವೆ. ತೂಕದಲ್ಲಿ ಹಗುರವಾಗಿರುವ ಅದರ ಉತ್ಪನ್ನಗಳು ನಮ್ಮ ಬಜೆಟಿಗೆ ಕಡಿಮೆ ವೆಚ್ಚದ ಸಾಮಾಗ್ರಿಗಳನ್ನು ಪೂರೈಸುತ್ತವೆ. ಹಾಗಾಗಿ ನಾವು ಬದುಕುವ ನಗರ ಮತ್ತು ಹಳ್ಳಿಗಳಾಚೆಯೂ ಅವುಗಳನ್ನು ಒಯ್ದು ನಮ್ಮ ಉಪಯೋಗದ ನಂತರ ಬಿಸಾಡುತ್ತೇವೆ. ಸೌಂದರ್ಯವನ್ನು ಸವಿಯಲೆಂದು ಬೆಟ್ಟದೆತ್ತರಕ್ಕೆ ಏರಿದಾಗ, ಸುಂದರ ಸಂಜೆಯನ್ನು ಸವಿಯಲು ಸಮುದ್ರ ತೀರಕ್ಕೆ ಹೋದಾಗ ನಾವು ಕೊಂಡು ಹೋದ ತಿಂಡಿಗಳ ಪ್ಲಾಸ್ಟಿಕ್ ಚೀಲಗಳನ್ನು ಅಲ್ಲಿಯೇ ಬಿಟ್ಟು ಬರುತ್ತೇವೆ. ಮಿಲಿಯನ್ ಟನ್ನುಗಳಷ್ಟು ಪ್ಲಾಸ್ಟಿಕ್ ತ್ಯಾಜ್ಯಗಳು ನಮ್ಮ ಭೂಮಿಯ ಮೇಲೆ ನಾವು ನೋಡುತ್ತಿದ್ದೇವೆ. ಆದರೆ ಅದಕ್ಕಿಂತಲೂ ಹೆಚ್ಚು ಗಾತ್ರದ ಪ್ಲಾಸ್ಟಿಕ್ ತ್ಯಾಜ್ಯಗಳು ನಮ್ಮ ವಿಶಾಲವಾದ ಸಮುದ್ರದ ತಟವನ್ನು ಸೇರುತ್ತವೆ. ಭೂಮಿಯ ಮೇಲಿನ ಪ್ರಾಣಿಗಳಿಗಿಂತಲೂ ಹೆಚ್ಚು ಸೂಕ್ಷ್ಮವಾಗಿರುವ ಜಲಚರ ಜೀವಿಗಳು ಪ್ಲಾಸ್ಟಿಕ್ ತ್ಯಾಜ್ಯದಿಂದ ಅಳಿವಿನಂಚಿಗೆ ಸೇರಿವೆ. ಸಾವಿರಾರು ವರ್ಷಗಳಾದರೂ ಮತ್ತೆ ಮಣ್ಣು ಸೇರದ ಪ್ಲಾಸ್ಟಿಕ್ ಈಗಾಗಲೇ ಭೂಮಿಯ ಸುತ್ತಲೆಲ್ಲ ಹರಡಿಕೊಂಡಿದೆ. ಅದನ್ನು ಸಂಗ್ರಹಿಸಿ ಮರುಬಳಕೆ ಮಾಡಲಾಗದಷ್ಟು ದೂರ ನಾವು ಬಂದಿದ್ದೇವೆ. ಇಂತಹ ಅನಾಹುತವನ್ನು ಮಾಡಿರುವ ಈ ತಲೆಮಾರುಗಳ ಮಾನವ ಸಮಾಜವನ್ನು ಮುಂದಿನ ತಲೆಮಾರಿನವರು ಶಪಿಸಲಿರುವರು. ಇಂತಹ ಅಪಾಯಕಾರಿ ಪ್ಲಾಸ್ಟಿಕ್ ಬಳಕೆಯನ್ನು ನಾವು ಇಂದೇ ನಿಲ್ಲಿಸಬೇಕಾಗಿದೆ. ಪ್ಲಾಸ್ಟಿಕ್‌ಗೆ ಪರ್ಯಾಯವಾಗಿ ನೈಸರ್ಗಿಕವಾಗಿ ಹಾನಿಯಾಗಿರದ ವಸ್ತುಗಳನ್ನು ನಾವು ಉಪಯೋಗಿಸಬೇಕು.

*** *** *** ***

ಬದುಕಿನ ಮಹತ್ತರ ಘಟ್ಟಗಳಲ್ಲಿ ಒಂದಾಗಿರುವ ಹತ್ತನೇ ಮತ್ತು ಹನ್ನೆರಡನೇ ತರಗತಿಯ ಪರೀಕ್ಷೆಗಳು ಮುಗಿದು ಫಲಿತಾಂಶಗಳು ಬಂದಿವೆ. ದೆಹಲಿಯ ಕನ್ನಡದ ವಿದ್ಯಾರ್ಥಿಗಳು ಉನ್ನತಮಟ್ಟದಲ್ಲಿ ಪಾಸಾಗಿದ್ದಾರೆ. ಉನ್ನತ ಶಿಕ್ಷಣಗಳಿಗಾಗಿ ಈಗಾಗಲೇ ಕಾಲೇಜು, ಶಿಕ್ಷಣ ಸಂಸ್ಥೆಗಳನ್ನು ಸೇರಿದ್ದಾರೆ. ಶಿಕ್ಷಣ ಮತ್ತು ವೃತ್ತಿಯ ಜತೆಗೆ ಕನ್ನಡದ ಕಳಕಳಿಯಿರಲಿ. ಎಲ್ಲರಿಗೂ ಹಾರ್ದಿಕ ಶುಭಾಶಯಗಳು. ಬೇಸಿಗೆಯ ಬಿಸಿಲು ಜತೆಗೆ ತಂಪೆರೆದ ಮಳೆ. ಮೇ–ಜೂನ್ ತಿಂಗಳು ದೆಹಲಿಯ ಬಹುತೇಕ ಕನ್ನಡಿಗರು ತಾಯ್ನಾಡಿಗೆ ತೆರಳುವ ಸಮಯ. ಮಕ್ಕಳಿಗೆ ಕರ್ನಾಟಕದ ಕಲೆ, ಸಂಸ್ಕೃತಿ ಮತ್ತು ಮತ್ತು ಬದುಕನ್ನು ಪರಿಚಯಿಸುವ ಅವಕಾಶ. ತಾಯ್ನಾಡಿನ ನೆನಪುಗಳನ್ನು ಹಂಚಿಕೊಳ್ಳಲು ಅಭಿಮತದ ಪುಟಗಳು ನಿಮಗಾಗಿ ಕಾದಿವೆ. ನಿಮ್ಮ ಅನುಭವಗಳನ್ನು ಸ್ನೇಹಿತರೊಡನೆ ಹಂಚೋಣ. ಅ

ಬಾಲಕೃಷ್ಣ ನಾಯ್ಕ್ ಡಿ.

# ಸುಡುಬಿಸಿಲಿನ ಕಡುಕಷ್ಟಗಳ ಹಾಡು...



ಉತ್ತರ ಭಾರತವೀಗ ಕಾದ ಕಾವಲಿಯಾಗಿದೆ. ಕಾಳಿದಾಸನ ಋತುಸಂಹಾರ ಪ್ರಾರಂಭವಾಗುವುದೇ ಬೇಸಿಗೆ ವರ್ಣನೆಯಿಂದ. ನಿನ್ನೆಯ ತಾಪಮಾನ 43 ಡಿಗ್ರಿ. ಇನ್ನು 45 ಡಿಗ್ರಿ ಉಷ್ಣತೆಯಲ್ಲಿ ಬಿಸಿಲಿನ ಕೆಂಡಗಳನ್ನು ಸೆರಗಲ್ಲಿ ಕಟ್ಟಿಟ್ಟುಕೊಂಡೇ ಓಡಾಡಬೇಕಿನ್ನು. ಆಟೋ ಓಡುವಾಗ ಕುಲುಮೆಯ ತಿದಿಯಿಂದ ಊದಿದಂತೆ ಬಿಸಿಗಾಳಿ ರಪರಪ ಬಡಿಯುತ್ತದೆ.

ಇಡೀ ಊರೇ ಕುಂಬಾರನ ಒಲೆಗೂಡು, ಬೆಂಕಿಯುಗುಳುವ ನೆಲ, ಚುರುಗುಡುವ ರಸ್ತೆ, ಕಾಯುವ ನೆತ್ತಿ, ದೆಹಲಿಯ ಬೇಸಿಗೆಯೆಂದರೆ ಡಿಟಿಸಿ ಬಸ್ಸಿದ್ದಂತೆ. ಬೇಕಾದಾಗ ಬರುತ್ತದೆ ಹೋಗುತ್ತದೆ, ಅದರ ಅವಸ್ಥೆಯನ್ನು ಸಹಿಸಲೇ ಬೇಕು! ಯಾರೂ ಏನೂ ಮಾಡುವ ಹಾಗಿಲ್ಲ! ನೀವು ಬೇಕಾದರೆ ಹತ್ತಿ ಇಲ್ಲಾ ಬಿಡಿ.

ದೆಹಲಿಯ ಬೇಸಿಗೆಯೆಂದರೆ ನೆನಪಾಗುವುದು ಮಟ ಮಟ ಮಧ್ಯಾಹ್ನ ಟನ್ ಟನ್ ಗಂಟೆ ಬಾರಿಸಿಕೊಂಡು ಗಲ್ಲಿಯಲ್ಲಿ ಬರುವ ಕುಲ್ಫಿ ಮಾರುವವ. ಬರ್ಫ್ ಕಾ ಗೋಲಾ ಚುಸ್ಕಿ ನಾವು ಚಿಕ್ಕವರಿರುವಾಗ ಶಾಲೆ ಹತ್ತಿರ ಬರ್ಫ್ ಹೆರೆದು ಕಡ್ಡಿಗೆ ಸಿಕ್ಕಿಸಿ ಬಣ್ಣದ ಸಿಹಿ ಹಾಕಿ ಕೊಡುತ್ತಿದ್ದ ಕ್ಯಾಂಡಿಯ ಅವತಾರ. ಕಾಲೆ ಕಾಲೇ ಫಾಲ್ಸೆ ಎನ್ನುತ್ತ ಬಿಸಿಲಲ್ಲೂ ಸೈಕಲ್ ತಳ್ಳಿಕೊಂಡು ಮಾರುವವನ ಬುಟ್ಟಿಯಲ್ಲಿ ಚಿಕ್ಕ ಚಿಕ್ಕ ಕಪ್ಪು ಹಣ್ಣುಗಳು ನಮ್ಮೂರಿನ ಕವಳೆಹಣ್ಣು–ಪರಗಿ ಹಣ್ಣನ್ನು ನೆನಪಿಸುತ್ತವೆ. ಲಜ್‌ಪತ್‌ನಗರ, ಎಮ್. ಬ್ಲಾಕ್ ಮಾರ್ಕೆಟಿನಲ್ಲಿ ಗೋಲಾ ಬರ್ಫಿನ ವ್ಯಾಪಾರವೋ ವ್ಯಾಪಾರ. ಇಂಥ ಉರಿಯಲ್ಲೀಗ ಭುಟ್ಟಾ (ಗೋವಿನಜೋಳ) ಸುಡುವ ಕಂಪು ಮೂಗಡರುತ್ತದೆ. ಬಸ್ ಸ್ಟಾಪುಗಳಲ್ಲಿ ಉರಿಬಿಸಿಲಿನ ಪರಿವೆಯಿಲ್ಲದೇ ನಿಗಿ ನಿಗಿ ಕೆಂಡಗಳನ್ನು ಹೊತ್ತಿಸಿಕೊಂಡು ಗೊಂಜಾಳ ಸುಡುವವರನ್ನು ಕಂಡರೆ ಬಿಸಿಲೂ ನಾಚಬೇಕು.! ಬಿಸಿಲಿನ ತಾಪದಲ್ಲೂ ಜನ ಕ್ಷಣ ನಿಂತು ಭುಟ್ಟಾ ಸುಡಿಸಿಕೊಂಡು, ಉಪ್ಪು–ನಿಂಬೆಹಣ್ಣು ಸವರಿಸಿಕೊಂಡು ಮೆಲ್ಲುವ ಭುಟ್ಟಾದ ರುಚಿಯಲ್ಲಿ ನೀರಿಳಿಯುವ ಬೆವರನ್ನೇ ಮರೆತುಹೋಗುವುದನ್ನು ನೋಡಿ ಬೆರಗಾಗುತ್ತದೆ. ತಂಪುಗೊಳಿಸುವ ಪಾನೀಯಗಳೆಲ್ಲವೂ ಲಭ್ಯ. ಜಲಜೀರಾ, ನಿಂಬೂಪಾನಿ, ಬಂಟಾ ಮಾರುವವ ಕೋಲಿಗೆ ಗೆಜ್ಜೆಕಟ್ಟಿ ಝುಣಝುಣರೆಂದು ಕುಟ್ಟಿ ಗೆಜ್ಜೆಗಳು ಇಂಪಾಗಿ ಉಲಿದು ಗ್ರಾಹಕರನ್ನು ಸೆಳೆಯುವ ಮೋಡಿಗೂ ಸೆಕೆ ಓಡಬೇಕು.

ಇಂಥದೇ ಬೈಸಾಖಿ ಮುಗಿದು ಬಿಸಿಲು ಏರುತ್ತಿರುವ ದಿನಗಳಲ್ಲಿ ರಾವತ್ ಈ ಕಂಪನಿಯನ್ನು ತೊರೆದು ದೊಡ್ಡ ಸಾಹೇಬರ್ ಹಿಂದೆ ಅವರು ತೋರಿಸಿದ ಕನಸುಗಳ ಬೆನ್ನೇರಿ ಹೋಗಿದ್ದ.ದುಡಿಯುವವರಿಗೆ ಎಲ್ಲಾದರೂ ಸೈ. ದುಡಿಮೆ ಬೇಕು. ಹಣ ಬೇಕು ಅಷ್ಟೇ! ಈಗಲೂ ಈ ಹುದ್ದೆ ಬಿಟ್ಟು ಇನ್ನೊಂದು ಮಗದೊಂದು ಅನ್ನುತ್ತ ಕಂಡ ಕಂಡ ನಂಬಿದ ಬಿಳಿ ಕಾಲರಿನ ಸಾಹೇಬರುಗಳ ಹಿಂದೆ ಹೋದವರೆಷ್ಟೋ. ರಾವತನಂತೆ ಸಾಹೇಬರಿಗೇನೂ ಹಣದ ಅಭಾವವಿಲ್ಲ. ದೇಶ ವಿಭಜನೆಯ ಕಾಲಕ್ಕೆ ದೆಹಲಿಯ ಪ್ರಮುಖ ಭಾಗದಲ್ಲಿ ಹಲ ನಿವೇಶನಗಳಿದ್ದು ಕಾಲಾಂತರದಲ್ಲಿ ಅವನ್ನು ಮಾರಿ ಬೇಕಾದ್ದು ಇಟ್ಟುಕೊಂಡು ಸ್ವಂತ ಉದ್ದಿಮೆಯನ್ನು ಹೆಮ್ಮರವಾಗಿಸಿದ್ದಾರೆ. ಹಾಗೇ ನೌಕರರಿಗೇನು ಕೊರತೆ! ಕಾರ್ಪೋರೇಟ್ ಕಂಪನಿಯಿಂದ ಅವರು ಪ್ರತಿ ತಿಂಗಳೂ ಗಳಿಸುವ ಪಗಾರ ಸುಮ್ಮನೆ ರೋಟೇಶನ್ ಇರಲಿ ಎಂದು. ನಾಕಾರು ಗಾಡಿ, ಬಂಗಲೆ, ನೌಕರ ಚಾಕರರು. ಪೆಟ್ರೋಲ್ ಖರ್ಚು ಕಂಪನಿ ಕೊಡುತ್ತದೆ. ಮತ್ತಿನ್ನೇನು ಬೇಕು?

ರಾವತ್ ಹಾಗಲ್ಲ. ದುಡಿದು ನಾಲ್ಕು ಪೈಸೆ ಗಳಿಸಲೆಂದೇ ಎಲ್ಲರಂತೆ ದೂರದ ಪಹಾಡಿಯಿಂದ ಬಂದವನು. ಉತ್ತರಾಖಾಂಡ್ ಮೂಲದ ಗಡವಾಲಿ. ಆಫೀಸಿನ ಹೊರಗಿನ ಕೆಲಸವೆಲ್ಲ ಅವನದು. ಫೀಲ್ಡ್ ಬಾಯ್, ಚೆಕ್ ಡಿಪಾಸಿಟ್ ಮಾಡು, ಹಣ ತಕ್ಕೊಂಡು ಬಾ, ಮನಿಯಾರ್ಡರ್ ಮಾಡಿ ಬಾ, ಪಿ.ಎಫ್. ಆಫೀಸಿಗೆ ಹೋಗುವ ಕೆಲಸ, ಮತ್ತೆಲ್ಲೋ ಹೋಗಿ ಯಾರಿಗೋ ಮತ್ತೆಂಥದೋ ದಸ್ತವೇಜುಗಳನ್ನು ತಲುಪಿಸೋ ಕೆಲಸ, ಅವನಿಗೆ ಗೊತ್ತಿರದ ಇಲಾಖೆಗಳೇ ಇಲ್ಲ. ಮಾಡದ ಕೆಲಸವೇ ಇಲ್ಲ. ಕಂಪನಿ ಕೆಲಸದ ಜತೆ ಹಿರಿಯ ಅಧಿಕಾರಿಗಳ ಮನೆ ವಿದ್ಯುತ್ ಬಿಲ್ಲು, ನೀರಿನ ಬಿಲ್ಲು ಕಟ್ಟುವ ಕೆಲಸ, ನನ್ನಂಥ ಮೇಡಮ್ಮುಗಳ ಎಲ್.ಐ.ಸಿ. ಕಂತು ಕಟ್ಟುವುದು, ಊರಿಗೆ ಎಂ.ಓ. ಮಾಡುವುದು ಇತ್ಯಾದಿ ಅವನದೇ. ಆಗಿನ ಎಟಿಎಂ ವ್ಯವಸ್ಥೆ ಇರದ ಕಾಲದಲ್ಲಿ ಎಲ್ಲರಿಗೂ ರಾವತನೇ ಬ್ಯಾಂಕಿನಿಂದ ಹಣ ತಂದುಕೊಡುವ ವಿತ್ತದೂತ. ಇನ್‌ಕಂ ಟ್ಯಾಕ್ಸ್, ಮುನ್ಸಿಪಲ್, ವಿದ್ಯುತ್ ಇಲಾಖೆ ಅವನ ಕಾರ್ಯಕ್ಷೇತ್ರದ ಪಟ್ಟಿ ಹಾಗೇ ಬೆಳೆಯುತ್ತದೆ.

ಹೀಗೆ ಎಲ್ಲರಿಗೂ ಬೇಕಾದ ರಾವತ್‌ನನ್ನು ಸಾಹೇಬರು ತಮ್ಮ ಹಿಂದೆ

ಕರೆದೊಯ್ದಿದ್ದು ಅಥವಾ ಅವರ ಹಿಂದೆ ಇವನು ಹಲ್ಲು ಕಿರಿದುಕೊಂಡು ಹೋದದ್ದಂತೂ ನಿಜ. ಅವನ ನಗುಮುಖದಲ್ಲಿ ದೀನವಾದ ನೋಟ, ಕೃಶವಾದ ಬಿದಿರುಕೋಲಿನಂತ ಕಪ್ಪು ದೇಹ, ಗುಳಿಬಿದ್ದ ಕೆನ್ನೆ-ಕಣ್ಣಿನ ಕುಣಿಯಲ್ಲಿ ಹೂತುಹೋದ ಬರೀ ಬಿಳಿಗುಡ್ಡೆ ಕಾಣುವ ಪ್ರೇತವೊಂದು ಇಲ್ಲೆ ಎಲ್ಲೋ ಸುಳಿದಾಡುತ್ತಿರುವಂತೆ ಭಾಸವಾಗುತ್ತಿತ್ತು.

ರಾವತ್‌ನ ನೂರಾರು ಕನಸುಗಳಲ್ಲಿ ದೂರದ ಊರಲ್ಲಿನ ತನ್ನ ಕೃಷಿಗಾಗಿ ಒಂದು ಟ್ರಾಕ್ಟರ್ ಕೊಳ್ಳಬೇಕೆನ್ನುವುದು. ಅವನ ಕುಟುಂಬವೆಲ್ಲ ಊರಲ್ಲಿತ್ತು. ಅಣ್ಣ-ತಮ್ಮಂದಿರುಗಳೆಲ್ಲ ಮನೆ ಮಠ ನೋಡಿಕೊಳ್ಳುತ್ತಿದ್ದು ಅವ ದಿಲ್ಲಿಗೆ ಕೆಲಸವನ್ನರಸಿ ಬಂದು ಇಲ್ಲಿಯೇ ನೆಲೆಸಿಹೋಗಿದ್ದನೆನ್ನಬಹುದು ಅಥವಾ ದಿಲ್ಲಿಯೆಂಬ ಮಾಯೆ ನಮ್ಮಂತೆ ಅವನನ್ನೂ ಗಾಢವಾಗಿ ಆಲಂಗಿಸಿತ್ತು ಎನ್ನಬಹುದು. ಅವನಿಗೆ ಕೃಷಿಗಾಗಿ ಟ್ರ್ಯಾಕ್ಟರ್‌ವೊಂದನ್ನು ಕೊಳ್ಳಲು ಹಣಕಾಸು ಸಹಾಯ ಮಾಡುತ್ತೇವೆಂದ ಆಮಿಶ ಅವನನ್ನು ಬಡ ಕಣ್ಣಲ್ಲಿ ಕನಸುಗಳನ್ನು ತುಂಬಿಕೊಂಡು ಸಿರಿವಂತರ ಹಿಂದೆ ಹೋಗುವಂತೆ ಮಾಡಿತು. ಒಂಥರಾ ಅವರ ನಡುವಿನ ಒಡಂಬಡಿಕೆಯಂತೆ ತೋರುತ್ತಿತ್ತು. ನಾಲ್ಕಾರು ವರ್ಷಗಳ ಸುದೀರ್ಘ ಒಡನಾಟದಲ್ಲಿ ರಾವತ್ ಅವರ ಮನೆಯ ಸದಸ್ಯನಂತೆ ಒಂದಾಗಿ ಹೋಗಿದ್ದ. ಸಾಹೇಬರ ಮನೆಯವರೆಲ್ಲ ಕಾರ್ಬೆಟ್ ರಾಷ್ಟ್ರೀಯ ಉದ್ಯಾನಕ್ಕೆ ಹೋಗುವ ಯೋಜನೆ ಮಾಡಿದಾಗ ಹೆಚ್ಚು ಸಂಭ್ರಮಿಸಿದ್ದು. ಈ ರಾವತ್. ಕಾರ್ಬೆಟ್‌ನಲ್ಲಿ ಸಾಹೇಬರ ಕುಟುಂಬದ ಎಲ್ಲ ವ್ಯವಸ್ಥೆಗೆ ಸ್ಥಳೀಯವನಾಗಿ ಏನೆಲ್ಲ ಅತಿಥಿ ಸತ್ಕಾರ ಮಾಡಬೇಕೋ ಅದನ್ನೆಲ್ಲ ಮಾಡಿ ಅವರ ಋಣ ತೀರಿಸಿದ. ಅವರನ್ನೆಲ್ಲ ಕರೆದೊಯ್ದು ತನ್ನ ಮನೆ-ಜಮೀನು-ಜಾನುವಾರು, ಹಚ್ಚಗೆ ಬೆಳೆದು ಮೈತುಂಬಿದ ಕೃಷಿ ಭೂಮಿಯನ್ನೂ ತೋರಿಸಿ ಮೆರೆದ. ಆದರೆ ದೊಡ್ಡ ಮನುಷ್ಯರು ಅವನಿಗಿದ್ದ ಚೂರು ಆಸ್ತಿ-ಪಾಸ್ತಿ ಸಂತೋಷಪಡುವದಕ್ಕಿಂತ ಹಲುಬಿದರು.

ಅರೇ ರಾವತ್ ಹಮ್‌ಸೇ ತೋ ತುಮ್ಹೀ ಅಮೀರ್ ಹೋ ಭಾಯ್! ಯಹ್ ಘರ್ ಬಾರ್-ಜಮೀನ ಜಾಯದಾದ ಏನು ಕಡಿಮೆಯಿದೆ. ನೀನು ಇದನ್ನೆಲ್ಲ ಬಿಟ್ಟು ಸುಮ್ಮನೇ ಕತ್ತೆ ತರ ದುಡಿತಿದ್ದೀ! ನಿನ್ನ ಜಾಗದಲ್ಲಿ ನಾವಿದ್ದರೆ ಹಾಯಾಗಿ ಫಾರ್ಮ್ ಹೌಸ್ ಕಟ್ಟಿಕೊಂಡು ಇಲ್ಲೇ ಕೃಷಿ ಮಾಡಿಕೊಂಡಿರುತ್ತಿದ್ದೆವು. ಎಂಥಾ ಹಸಿರು, ಸ್ವಲ್ಪವೂ ಪಾಲ್ಯೂಷನ್ ಇಲ್ಲ ಎಂದು ಹೊಗಳಿದ್ದೂ ಹೊಗಳಿದ್ದೇ. ಆದರೆ ದೆಹಲಿಗೆ ಮರಳುತ್ತಲೂ ಸಾಹೇಬರ ಮತ್ತು ಮೇಮ್ ಸಾಹೇಬರ ಕಣ್ಣಲ್ಲಿ ರಾವತ್ ಒಬ್ಬ ಭಿಕಾರಿಯಂತೆ ಕಾಣುವ ಭಾರಿ ಕುಳ. ಅಂಥವನಿಗೆ ನಾವ್ಯಾಕೆ ಟ್ರ್ಯಾಕ್ಟರ್ ಕೊಳ್ಳಲು ಹಣ ಸಹಾಯ ನೀಡಬೇಕು? ಸಂಬಳಕೊಡ್ತೇದ್ದೀವಲ್ಲ!! ಮುಂದಿನ ಕಥೆ ನಿಮಗೆ ಗೊತ್ತಾಗಿ ಹೋಯಿತೀಗ. ತಾನು ಎಣಿಸಿರದಿದ್ದ ಮಾನಸಿಕ ಕಿರುಕುಳಗಳೆಲ್ಲ ರಾವತ್‌ನನ್ನು ಒಬ್ಬ ತಲೆತಿರುಕ, ತಿರಸಷ್ಟನನ್ನಾಗಿಸಿದವು. ಕನಸಿನ ಪಾರಿಜಾತಗಳೆಲ್ಲ ಮಣ್ಣಲ್ಲಿ ಹುಡಿಯಾಗಿ ಹೋದವು.

ವಿದೇಶಿ ಗಾಡಿಯಲ್ಲಿ ಜುಮ್ಮಂತ ಮೆರೆಯುವ, ಪಾರ್ಲರಿನ ಸುಖಾಸನದಲ್ಲಿ ಸೇವೆ ಮಾಡಿಸಿಕೊಳ್ಳುವ, ಹಾಲು-ಬ್ರೆಡ್ಡು, ಮಾಂಸ ಮತ್ತು ಪೆಡಿಗರಿಯನ್ನೇ ತಿನ್ನುವ ಮಹಾನಗರದ ನಾಯಿಗಳನ್ನು ಕಂಡರೆ ಅದ್ಭುತ ಸಂಕಟವಾಗುತ್ತದೆ. ಈಗೀಗ ಈ ಸಿರಿವಂತ ನಾಯಿಗಳಿಗಾಗಿಯೇ ಗುರುಗ್ರಾಮದಲ್ಲಿ ಒಂದು ಪಂಚತಾರಾ ಹೋಟೇಲೂ ಆಗಿದೆಯೆಂದು ಓದಿದ ನೆನಪು. ರಾವತನಂಥವರು ಪಡೆಯುವ  ಐದೋ ಆರೋ ಸಾವಿರ ಸಂಬಳಕ್ಕಿಂತ ಅವರ ಮನೆಯ ವಿದೇಶಿ ತಳಿಯ ಜೂಲುನಾಯಿಯ ಬ್ಯೂಟಿಪಾರ್ಲರ್ ಖರ್ಚೇ ಜಾಸ್ತಿಯಿತ್ತೇನೋ!! ಪಾರ್ಲರಿನ ದೇವತೆಗಳು ಅವಳ ಉಗುರು, ಕೂದಲನ್ನು ಟ್ರಿಮ್ಮಾಗಿ ಕತ್ತರಿಸಿ, ಶಾಂಪೂ ಹಾಕಿ ತೊಳೆದು- ಸೌಂದರ್ಯ ವರ್ಧಿಸುವ ಎಲ್ಲ ಕೌಶಲ್ಯವನ್ನು ತೋರಿಸುತ್ತಿದ್ದರು. ಜತೆಗೆ ಗಳುವಿನಂತೆ ಈಗ ಬೀಳುತ್ತೋ ಎನ್ನುವ ರಾವತ್‌ನ ಕಪ್ಪು ಆಕೃತಿ. ಜೊಲ್ಲು ಸುರಿಸುತ್ತೆನೋ ಅನ್ನುವ ಅವನ ನೋಟ, ಎಲ್ಲ ನೆನಪಾಗಿ ಹೊಟ್ಟೆಯಲ್ಲಿ ಯಾರೋ ಈಟಿಯಿಂದ ತಿವಿದಂತಾಗುತ್ತದೆ. ಮನುಷ್ಯ ಪ್ರಾಣಿಗಳನ್ನು ಪ್ರಾಣಕ್ಕಿಂತ ಹೆಚ್ಚು (ಮಾಡಬಾರದೆಂದು ಅರ್ಥದಲ್ಲಿ ಅಲ್ಲ) ಪ್ರೀತಿಸುತ್ತ ಮನುಷ್ಯರನ್ನು ಪ್ರಾಣಿಗಳಿಗಿಂತಲೂ ಕಡೆಯಾಗಿ ನಡೆಸಿಕೊಳ್ಳುವ ದಾರುಣ ದೃಶ್ಯ ಎದೆಸುಡುತ್ತದೆ.ಕವಡೆಯ ಕಿಮ್ಮತ್ತೂ ಇಲ್ಲ ಎನ್ನುವಂತೆ ನೆತ್ತಿ ಸಿಡಿದು ಹೋಳಾಗುವ ಕಡುಬಿಸಿಲಿನಲ್ಲಿ ತಲೆಗೆ ಟವಲ್ಲು ಸುತ್ತಿ ದುಡಿವ ಕಾರ್ಮಿಕರನ್ನು ಕಂಡಾಗ ತಾ ಝಳವುಂಡರೂ ಅರಳಿ ಸುರಿಯುವ ಅಮಲ್ತಾಸ್ ಮರ ನಕ್ಕಂತಾಗುತ್ತದೆ?. ಅ

***ರೇಣುಕಾ ನಿಡಗುಂದಿ***

## ಅಭಿನಂದನೆ



### ನಾನು

**ಅ**ಕ್ಷರ ಕಲಿತು ಅಡ್ಡಾದಿಡ್ಡಿ ಪಂಕ್ತಿಗಳನ್ನು ಬರೆದು

**ಹ**ಲವಾರು ಬಾರಿ ಗೀಚಿ ಹರಿದು ಕೈವ

**ಲ್ಯಾ**ಧಿಪತಿಗೆ ನಮಿಸುತ್ತಾ ತಿಣುಕಿ ಅಂತೂ ಇಂತೂ

**ಚಿಂ**ತಿಸದ ಚೆನ್ಮಯನನ್ನು ನೆನೆದು

**ತಾ**ಯ್ನುಡಿಯಲ್ಲಿ ತೋಚಿದ್ದನ್ನು ಬರೆದು

**ಮ**ಮತೆಯ ತ್ರಕ್ಷರಿ ಕನ್ನಡ ಭಾಷೆಗೆ ಋ

**ಣಿ**ಯಾಗಿರುವ ವೃದ್ಧಳಾದ ನನ್ನ "ಅಕವಿತೆ"ಗೆ ತಾವು

ನಲ್ನುಡಿ ಯ ಮುನ್ನುಡಿಯನ್ನು ಬರೆದಿರುವಿರಿ.

ಬಹಳ ದಶಕಗಳ ಹಿಂದೆ ವಿ. ಸೀತಾರಾಮಯ್ಯನವರು "ಪಂಜರದಲ್ಲಿರುವ ಹಕ್ಕಿ ದಿನ ಪೂರ್ತಿ ತಲೆತಗ್ಗಿಸಿಕೊಂಡು ಹಾರಲು ಪ್ರಯತ್ನಿಸುತ್ತದೆ. ಅದರ ರೆಕ್ಕೆ ಪುಕ್ಕವನ್ನು ಕತ್ತರಿಸದೆ ಪಂಜರದ ಬಾಗಿಲನ್ನು ತೆರೆದಿಡಿ, ಅದು ಕ್ಷಣದಲ್ಲಿ ಹಾರಿ ತನ್ನವರನ್ನು ಸೇರಿಕೊಳ್ಳುತ್ತದೆ" ಎಂಬ ನಿದರ್ಶನದಿಂದ ಹುಟ್ಟುತ್ತಲೇ ಯಾರೂ ಕವಿಯಾಗಿ ಹುಟ್ಟುವುದಿಲ್ಲ. ಅವರು ಏನಾದರೂ ಬರೆದರೆ ಅದನ್ನು ಓದಿ ತಪ್ಪುನೆಪ್ಪುಗಳನ್ನು ತಿದ್ದಿ ಪ್ರೋತ್ಸಾಹಿಸಬೇಕು ಎಂದು ಯುವ ಲೇಖಕರ ಬಗ್ಗೆ ಕಿವಿಮಾತು ಹೇಳಿದ್ದರು.

ಈ ಅಜ್ಞಾನಿ ಅಹಲ್ಯಳು ವಯೋವೃದ್ಧಳಷ್ಟೆ; ಜ್ಞಾನವೃದ್ಧರಾದ ತಾವು ಮುನ್ನುಡಿ ಬರೆದು, ನನ್ನ ಮನಸ್ಸಿನಲ್ಲಿ ಹೂತು ಹೋಗಿದ್ದ ಆಸೆಯನ್ನು ಹೊರ ತಂದಿದ್ದೀರಿ.

ನಾನು ತಮಗೆ ಆಜನ್ಮ ಚಿರಋಣಿ. ತಾವು 2009-2010ರಲ್ಲಿ "ನೃಪತುಂಗ ಕನ್ನಡ ಸಂಘ" ಬೆಂಗಳೂರು ವತಿಯಿಂದ ಶಾಲು ಹೊದಿಸಿ ಸನ್ಮಾನಿಸಿದ್ದೀರಿ. ಆ ಸನ್ಮಾನಕ್ಕೆ ನಾನು ಯೋಗ್ಯಳಲ್ಲದಿದ್ದರೂ, ತಮ್ಮಿಂದ ಪಡೆದ ಸನ್ಮಾನ ನನ್ನ ಅಹೋಭಾಗ್ಯ!

ತಾವು ರಾಷ್ಟ್ರದ ಉನ್ನತ ಪ್ರಶಸ್ತಿ ಪಡೆದಿದ್ದೀರಾ-ಶೃಂಗೇರಿ ಶಾರದೆಯ ವರದಾಯಕ ಹಸ್ತ ತಮ್ಮನ್ನು ಕೈ ಹಿಡಿದು ಇನ್ನೂ ಉನ್ನತೋನ್ನತ ಪ್ರಶಸ್ತಿ ಪಡೆಯುವಂತೆ ಅನುಗ್ರಹಿಸಲೆಂದು ಕಾಶ್ಮೀರ ಪುರವಾಸಿನಿ ಶ್ರೀ ಶಾರದೆಯನ್ನು ಪ್ರಾರ್ಥಿಸುವೆ. ಅ

***ಡಾ. ಅಹಲ್ಯಾಚಿಂತಾಮಣಿ***

## ನಾ ನಿನ್ನವಳು

ನಿನ್ನ ಒಂದೇ ಒಂದು ಕರೆಗೆ
ನನ್ನ ಹೃದಯದ ಬಡಿತ ಹುಚ್ಚೆದ್ದು ಕುಣಿಯುವುದಲ್ಲ
ನೀ ಕೊಟ್ಟ ನೆನಪುಗಳು
ನೀಲ ಕಂಗಳ ಕಾಡಿಗೆಯಾಗಿದೆಯಲ್ಲ
ಒಲವಿನಿಂದಾ ನೀ ಕೊಟ್ಟ ಮುತ್ತುಗಳು
ನಲಿವ ಮುಂಗುರುಳಾಗಿವೆಯಲ್ಲಾ
ನಿನ್ನ ನೆನಪೊಂದೇ ಸಾಕು
ಥಟ್ಟನೇ ತುಟಿಯಂಚಿನಲಿ ಮಿಂಚುತರುವುದಲ್ಲ
ನೀ ಕಟ್ಟಿದ ಮಾಂಗಲ್ಯ ಸರ
ಹೃದಯಕ್ಕೆ ಕಾವಲಾಗಿದೆಯಲ್ಲ
ನೀ ಹಚ್ಚಿದ ಕೆಂಪು ಬೊಟ್ಟು
ನಾ ನಿನ್ನವಳೆಂದೆ ಸಾರುತಿದೆಯಲ್ಲ.
ನನ್ನ ಪ್ರೀತಿಯ ನಲ್ಲಾ
ನೀನೇ ನನ್ನ ಜೀವದ ಉಸಿರಾಗಿರುವೆಯಲ್ಲ.

*ಸವಿತಾ ಇನಾಮದಾರ*



## ಮಂಜು

ಮುಂಜಾವಿನ ಮಂಜು ಹನಿ
ಇಣಿಕು ನೋಡಿತೆನ್ನನು
ಮಧುರ ಮಿಲನದ ಮತ್ತನ್ನು ಕಂಡು
ನಕ್ಕು ಅಣಕಿಸಿತೆನ್ನನು.
ರಾತ್ರಿಯಂತೆ ಹಬ್ಬಿದ ಕೇಶರಾಶಿಯ ನೋಡಿ
ಕಿಸಕ್ಕನೇ ಕೆಣಕಿತು
ನನ್ನ ಕೆಂಪಾದ ಕಪೋಲವ ನೋಡಿ
ತಾನೂ ನಾಚಿ ನೀರಾಯಿತು.

*ಸವಿತಾ ಇನಾಮದಾರ*

## ನಾವಿಕರು

ಖಾಲಿ ನಾವೆಯನ್ನು
ಎದುರಿಗಿಟ್ಟುಕೊಂಡು ದೂರ
ನಕ್ಷತ್ರಗಳ ತೀರದಲ್ಲಿ
ಹುಡುಕುತ್ತಿದ್ದೆ ನಿನ್ನ ತಾವನ್ನು !

ಒಂದಕ್ಕೊಂದು ಸವರಿಹೋಗುವ
ಅಲೆಗಳಂತೆ ನಾವೂ
ಬಹಳಷ್ಟು ಸಾರಿ ಸವರಿಹೋದೆವು
ಎದುರುಬದುರಲ್ಲೇ
ಅಕ್ಕಪಕ್ಕದಲ್ಲೇ ಸರಿದುಹೋದ ಗಾಳಿಯಂತೆ
ನಡೆದೆವು ಸುಮ್ಮನೇ
ಹೊತ್ತುಮುಳುಗುವುದನ್ನೇ ಕಾಯುತ್ತಿದ್ದಂತೆ !

ದೋಣಿ ಸಾಗುತ್ತಲೆ ಇತ್ತು
ಆ ದಡದಿಂದ ಈ ದಡಕ್ಕೆ
ನಿರಂತರ ಅಲೆವ ಪಥಭ್ರಷ್ಟನಂತೆ
ಒಮ್ಮೊಮ್ಮೆ ಬಿಸಿಲಿನ ಸರಕು
ಮತ್ತೊಮ್ಮೆ
ಚಂದ್ರನ ತುಂಡುಗಳನ್ನು
ಹೊತ್ತು !

ಈ ಹೊತ್ತು
ಮತ್ತದೇ ದಡದಲ್ಲಿ ಸಿಕ್ಕಿದ್ದೇವೆ,,,
ಕಳೆದುಹೋದವರು ಮತ್ತೆ ಸಿಕ್ಕವರಂತೆ
ತೆಕ್ಕೆಬಿದ್ದು ಬಿಕ್ಕುತ್ತಿದ್ದೇವೆ
ನಾವೆಯೂ ಅಲ್ಲೇ ಕಾಯುತ್ತಿದೆ
ಹೊರಡಬೇಕಿನ್ನು ಮತ್ತೆ
ಹೊತ್ತುಮುಳುಗುವ ಮುನ್ನ ಮತ್ತದೇ ತಾವಿಗೆ

*ರೇಣುಕಾ ನಿಡಗುಂದಿ*





# ಮದುವೆ ಹೆಣ್ಣು
## ಒಂದು ರಂಗಪ್ರಯೋಗ

'ಮದುವೆ ಹೆಣ್ಣು' ನಾಟಕ 2018ರ ಮೇ ಆರರಂದು ದೆಹಲಿ ಕರ್ನಾಟಕ ಸಂಘದಲ್ಲಿ ಪ್ರದರ್ಶನಗೊಂಡಿತು. ನಾಟಕದ ಹೆಸರು ಕೇಳುತ್ತಿದ್ದಂತೆ, ಇದೊಂದು ಸಾಮಾಜಿಕ ನಾಟಕವಿರಬೇಕೆಂಬ ಭಾವ ಸಹಜ. ಇರಲಿ, ಪ್ರಕೃತಿಯ ಮರಗಿಡಗಳು ಮಾನವನ ಪ್ರತಿ ಘಟನೆಗೂ ಮೂಕ ಸಾಕ್ಷಿಯಾಗಿ, ಅವು ಮಾನವ ಸಮುದಾಯದಲ್ಲಿ ನಡೆವ ಪ್ರತಿಯೊಂದಕ್ಕೂ ತಮ್ಮದೇ ಆದ ರೀತಿಯಲ್ಲಿ ಸ್ಪಂದಿಸುತ್ತಿರುತ್ತವೆ. ನಾಟಕದ ಪ್ರಾರಂಭ ಅವುಗಳ ಸಂಭಾಷಣೆಯಿಂದ ಪ್ರಾರಂಭವಾಗಿ ಇಡೀ ನಾಟಕದಲ್ಲಿ ಕೊನೆಯವರೆಗೂ ಒಂದು ರೀತಿಯ ಸೂತ್ರಧಾರನ ಪಾತ್ರವಾಗಿ ನಾಟಕ ನಡೆಸುವಲ್ಲಿ ಮಹತ್ವದ ಪಾತ್ರವಹಿಸಿವೆ.

ಮಾನವ ಜೀವಿಯ ನಂಬಿಕೆ, ಜನ್ಮ ಜನ್ಮಾಂತರದ ಕರ್ಮಫಲ ಇದು ಸರ್ವಕಾಲಕ್ಕೂ ನಡೆದು ಬಂದದ್ದು. ಯಾವುದೋ ಒಂದು ಕಾಲಘಟ್ಟದಲ್ಲಿ ಘಟಿಸಿದ ಘಟನೆಯ ಸುತ್ತ ನಾಟಕ ವರ್ತಮಾನ ಮತ್ತು ಭೂತಕಾಲಗಳ ಮಧ್ಯ ಚಲಿಸುತ್ತ ಸಾಗುತ್ತದೆ.

ಕಾಡಿನ ಮಾರ್ಗ ಕ್ರಮಿಸುತ್ತಿರುವ ಸಮಣಿ ಕ್ರೂರ ಮೃಗಗಳ ದಾಳಿಯಿಂದ ತನ್ನನ್ನು ತಪ್ಪಿಸಿಕೊಳ್ಳುತ್ತ ಹೊರಟಿರುವಾಗ ನದಿಯ ದಡದಲ್ಲಿ ಯುವಕನೋರ್ವ ತನ್ನ ರಕ್ತ ಸಿಕ್ತ ಕೈಗಳನ್ನು ಸ್ವಚ್ಛಗೊಳಿಸುವ (ಹಿಂದಿನ ಜನ್ಮದಲ್ಲಿ ತಾನೆಸಗಿದ ಪಾಪ ಕೃತ್ಯದಿಂದ ಮುಕ್ತನಾಗಬಯಸುವ) ವ್ಯರ್ಥ ಪ್ರಯತ್ನದಲ್ಲಿರುತ್ತಾನೆ. ಆತನ ಬಗ್ಗೆ ಕರುಣೆ ಹುಟ್ಟಿ ಸಮಣಿ ಆತನ ದುಗುಡವನ್ನು ಪರಿಹರಿಸುವ ನಿಟ್ಟಿನಲ್ಲಿ ಆತನ ಈ ಸ್ಥಿತಿಗೆ ಕಾರಣ ಕೇಳುವಳು.



ಕಾಡಿನಲ್ಲಿ ವಾಸಿಸುವ ಒಂದು ಸಮುದಾಯದ ರೀತಿಯಂತೆ ಯುವಕ ಯುವತಿಯರು ತಮ್ಮ ಬಾಳ ಸಂಗಾತಿಯನ್ನು ಆಯ್ದುಕೊಳ್ಳುವ ಪದ್ಧತಿಯಂತೆ ಆ ಸಮುದಾಯದ ನಾಯಕ ಮಗ ತನ್ನ ಸಂಗಾತಿಯನ್ನು ಆಯ್ಕೆ ಮಾಡಿಕೊಂಡಿದ್ದಾನೆ, ಇನ್ನು ಆತನ ಮದುವೆ ಕಾರ್ಯ ಜೊತೆಗೆ ಆತನಿಗೆ ಆ ಸಮುದಾಯದ ಹಿರಿತನದ (ನಾಯಕನ)ಪಟ್ಟ ಕೂಡ ಕಟ್ಟಬೇಕಾಗಿದೆ. ಮಗ ತನ್ನ ವಧುವನ್ನು ಆಯ್ದು ಸಂತೋಷದಿಂದ ತಂದೆಗೆ ಅರುಹಲು ಬಂದಾಗ, ಸಮುದಾಯದ ನಾಯಕ ಮಗನ ಆಯ್ಕೆಯನ್ನು ಸಂಭ್ರಮಿಸದೇ, ತೊಳಲಾಡುತ್ತಿರುವಾಗ, ಯುವಕನ ತಂದೆಯ ಈ ಸಮಯದ ಸಂದಿಗ್ಧತೆಯ ಕುರಿತು ಮಗ ಕೇಳಲಾಗಿ ಆತನು ಹುಟ್ಟಿದಾಗ ಸಮುದಾಯದ ದೈವ ದೇವಿ ನುಡಿದ ವಾಣಿ 'ಈತನ ಮದುವೆಯ ದಿನ ಒಂದು ಮಹಾನ್ ಅಪಾಯ ಜರುಗಲಿದೆ' ಕುರಿತಾದ ತನ್ನ ಚಿಂತೆಯನ್ನು ಮಗನಿಗೆ ತಿಳಿಸುತ್ತಾನೆ. ಮದುವೆಯ ಉತ್ಸಾಹದಲ್ಲಿದ್ದ ಯುವಕ ತನ್ನ ತಂದೆಗೆ ಚಿಂತಿಸದಿರುವಂತೆ ಹೇಳುತ್ತಾನೆ. ಈ ಸಂದರ್ಭಕ್ಕೆ ಯುವಕ ಪಾಲಿಸಬೇಕಾದ ನಿಯಮ 20 ದಿನಗಳು ಕಾಡಿನಲ್ಲಿ ಒಂಟಿಯಾಗಿ ವಾಸ, 21ನೇ ದಿನ ಒಂದು ಯುವಕನ ತಲೆ ಬುರುಡೆಯೊಂದಿಗೆ ಬಂದರೆ ಮದುವೆ ಹಾಗೂ ಸಮುದಾಯದ ನಾಯಕನ ಪಟ್ಟ.

ಕಾಡಿನಲ್ಲೇ ಹುಟ್ಟಿ ಬೆಳೆದ ತರುಣನಿಗೆ ಇದೇನು ದೊಡ್ಡ ಸವಾಲಾಗಲಿಲ್ಲ. 20ದಿನ ಏಕಾಂಗಿಯಾಗಿ ಕಾಡಿನಲ್ಲಿ ಕಳೆಯುವುದು, ನೀರು ಕುಡಿದಷ್ಟೇ ಸುಲಭವಾಗಿತ್ತವನಿಗೆ. ಸಮಸ್ಯೆ ಬಂದದ್ದು 21ನೇ ದಿನ ಯುವಕನ ತಲೆಬುರಡೆ ತರುವ ಕೆಲಸ. ಸುತ್ತಮುತ್ತಲ ಸ್ಥಳಗಳಿಂದ ಯುವಕರೆಲ್ಲ ಪಲಾಯನಗೈದು ಯಾರೂ ಸಿಗದೇ ಇದ್ದಂಥ ಸ್ಥಿತಿ.

ಇತ್ತ ಮದುವಣಗಿತ್ತಿ, ತನ್ನ ವರಿಸಲಿರುವ ಯುವಕನ ಸಹಾಯಕ್ಕಾಗಿ ಮನೆಯವರ ವಿರೋಧ

ಲೆಕ್ಕಿಸದೆ ಕಾಡಿಗೆ ತೆರಳುತ್ತಾಳೆ. ಕಾಡಿನಲ್ಲಿ ಭಯಂಕರ ಮಳೆ–ಗಾಳಿ, ಯುವತಿ ಬಸವಳಿದು ಒಂದು ಕಡೆ ಕುಸಿದು ಬೀಳುತ್ತಾಳೆ. ಕಾಡಿನಲ್ಲಿ ಯುವಕರ ಬೇಟೆಗಾಗಿ ಓಡಾಡುತ್ತಿರುವ ಆ ಯುವಕನಿಗೆ ಎಲ್ಲೆಲ್ಲೂ ನಿರಾಶೆ ಕಾದಿರುತ್ತೆ. ಹೀಗಿರಲು ಒಂದು ಕಡೆ ಒಂದು ಯುವ ಶರೀರ ಮುಖ ಕೆಳಗೆ ಮಾಡಿ ಬಿದ್ದಿರುವ ಸ್ಥಿತಿಯಲ್ಲಿ ಕಂಡು ಯುವಕ ತಡಮಾಡದೆ ಆ ಶರೀರದಿಂದ ರುಂಡ ಬೇರೆ ಮಾಡಿ, ಅದರ ಬುರುಡೆ ತೆಗೆದುಕೊಂಡು ವಸತಿಯತ್ತ ತೆರಳುತ್ತಾನೆ.

ಮದುವೆಯ ತಯಾರಿಯಲ್ಲಿರುವ ಆತನ ಜನ ಯುವಕನ ಬರುವಿಗಾಗಿ ಕಾಯುತ್ತಿರುತ್ತಾರೆ. ವಿಜಯಿಯಾದ ಯುವಕನ ಆಗಮನದ ನಂತರ ಮದುವೆ ಪೂರ್ವದ ಪೂಜೆಯ ಕಾರ್ಯ ಮುಗಿದು ಮದುಮಗಳನ್ನು ಕರೆತರಲು ಸಮುದಾಯದ ಪೂಜಾರಿ ಅಜ್ಞಾಪಿಸುತ್ತಾನೆ. ಮದುವೆ ಹೆಣ್ಣನ್ನು ಕರೆತರಲು ತಿಳಿಸಿದಾಗ, ಆತನ ತಾಯಿ ಎಷ್ಟೇ ತಡೆದರೂ ತನ್ನ ಮಾತು ಕೇಳದೆ ಅವಳು ತನ್ನ ವರಿಸುವವನ ಸಹಾಯಕ್ಕಾಗಿ ಕಾಡಿಗೆ ತೆರಳಿದ್ದಾಳೆ, ಇನ್ನೂ ಬಂದಿಲ್ಲ ಎಂದು ತಿಳಿಸುತ್ತಾಳೆ. ಅಷ್ಟರಲ್ಲಿ ಅವಳನ್ನು ಕಾಡಿನಲ್ಲಿ ಕೊಲ್ಲಲಾಗಿದೆ, ಅವಳ ರುಂಡ ಕಾಣದಾದ ಸಂಗತಿ ತಿಳಿಯುತ್ತದೆ. ತರುಣನಿಗೆ ತಾನು ಕೊಂದದ್ದು ತನ್ನ ಮದುವೆ ಹೆಣ್ಣೆ ಎಂದು ಅರ್ಥವಾಗುವಷ್ಟರಲ್ಲಿ ಪೂಜಾರಿ 'ಸೋಲಿನಲ್ಲಿ ಗೆಲುವಿದೆ, ಗೆಲುವಿನಲ್ಲಿ ಸೋಲಿದೆ, ಇಚ್ಛೆ ನೆರವೇರಲಿದೆ' ಎಂದು ಹೇಳುತ್ತಾ ದೇವಿ ಹೇಳಿದ ಕಾರಣಿಕ ಸತ್ಯವಾಯಿತೆಂದು ಹೇಳಿ ಅಲ್ಲಿಂದ ನಿರ್ಗಮಿಸುತ್ತಾನೆ. ಸ್ತ್ರೀ ಹತ್ಯೆಯ ದೋಷದಿಂದ ಜರ್ಜರಿತನಾದ ಯುವಕ ಇದರಿಂದ ಮುಕ್ತನಾಗಲು ಅಲೆಯುತ್ತಿರುವ ಸ್ಥಿತಿ. ಇದು ಜನ್ಮ ಜನ್ಮಾಂತರಕ್ಕೂ ಮುಂದುವರಿಯುತ್ತದೆ.

ಯುವಕ ತನ್ನ ಕರ್ಮದ ವಿವರ ಹೇಳುತ್ತಿರುವಾಗ ಈ ಘಟನೆಗೂ ತನಗೂ ಏನೋ ಸಂಬಂಧವಿದೆ, ಇಲ್ಲಾ ಆ ಯುವಕನೆಡೆಗೆ ತಾನು ಆಕರ್ಷಿತಳಾಗುತ್ತಿದ್ದೇನೆ ಅನ್ನೋ ಭಾವ, ಸಮಣಿಯಾದ ತನಗೆ ಈ ತರಹದ ಆಕರ್ಷಣೆ ಯೋಗ್ಯವೇ? ಈ ಎಲ್ಲಾ ಸಾಂಸಾರಿಕ ಬಂಧಗಳಿಂದ ಮುಕ್ತಳಾದ ತನಗೆ ಉಚಿತವೇ? ಎಂದು ತನ್ನಲ್ಲೇ ಪರಾಮರ್ಶಿಸಿಕೊಳ್ಳುತ್ತಿರುತ್ತಾಳೆ. ಈ ಘಟನೆಯಲ್ಲಿ ಪೂರ್ವ ಜನ್ಮದಲ್ಲಿ ಹತ್ಯೆಯಾದ ಆ ಯುವತಿಯೇ ಇಂದಿನ ಸಮಣಿ, ಯುವಕನನ್ನು ಕ್ಷಮಿಸುವಳು.

ಈ ತರಹದ ನಾಟಕಗಳನ್ನು ಪ್ರಯೋಗಕ್ಕೆ ಅಳವಡಿಸುವುದು ನಿರ್ದೇಶಕರಿಗೆ ಒಂದು ಚಾಲೇಂಜ್. ಎಚ್.ಎಸ್. ಶಿವಪ್ರಕಾಶ್ ಅವರ ಈ ನಾಟಕ ಕರ್ನಾಟಕದಲ್ಲಿ ಸಾಕಷ್ಟು ನಿರ್ದೇಶಕರು ಅವರವರ ಪ್ರತಿಭೆಗೆ ತಕ್ಕಂತೆ ಪ್ರಯೋಗಿಸಿದ್ದಾರೆ. ರಾಷ್ಟ್ರೀಯ ನಾಟ್ಯ ವಿದ್ಯಾಲಯದ ಪದವೀಧರರಾದ ಪಬಿತ್ರಾ ರಾಭ(ಅಸ್ಸಾಂ) ಅವರು ಇದನ್ನು ವಿಭಿನ್ನ ರೀತಿಯಲ್ಲಿ ಪ್ರಸ್ತುತಪಡಿಸಿದ್ದಾರೆಂದು ನಾಟಕ ಪ್ರಯೋಗದ ನಂತರ ಎಚ್.ಎಸ್. ಶಿವಪ್ರಕಾಶ್ ಅವರು ತಿಳಿಸಿದರು. ಇಲ್ಲಿ ಗಮನಿಸಬೇಕಾದ ಇನ್ನೊಂದು ವಿಷಯ 'ಥಿಯೇಟರ್ ಸಮುದಾಯ ಕಲ್ಚರಲ್ ಟ್ರಸ್ಟ್ (ರಿ) ಮುರಪ್ಪೆ ಮನೆ, ಹೆಗ್ಗೋಡು' ಅಸ್ಸಾಂಗೆ ಹೋಗಿ ಅಲ್ಲೇ ಇದ್ದು ಈ ನಾಟಕ ತಯಾರಿ ಮಾಡಿಕೊಂಡು ಒಂದು ಪ್ರದರ್ಶನ ಅಲ್ಲಿ ನೀಡಿ, ಎರಡನೇ ಪ್ರಯೋಗವನ್ನು ದೆಹಲಿ ಕರ್ನಾಟಕ ಸಂಘದಲ್ಲಿ ಪ್ರದರ್ಶಿಸಿದರು.

ಈ ನಾಟಕದಲ್ಲಿ ಕಲಾವಿದರಾದ; ಸಮಣಿ : ರಂಜಿತಾ ಜಾಧವ, ಗಂಡು : ಮುನೀತ ಶೆಟ್ಟಿ, ನಂದಕುಮಾರ ಕಟ್ಟಿಮನಿ, ಮುದುಕಿ, ಮದುವೆ ಹೆಣ್ಣು : ಸವಿತಾ ಕಾಳಿ, ಮರ, ಪೂಜಾರಿ : ಪ್ರದೀಪ ಕುಮಾರ ಜಿ., ಮರ, ಗಂಡಿನ ತಂದೆ : ಅಮೀತ ರೆಡ್ಡಿ, ಮರ, ಹೆಣ್ಣಿನ ತಂದೆ : ಹುಲ್ಲೇಶ ಕೊಪ್ಪಳ, ಮರ : ಶ್ರೀರಂಗ ಪರ್ವತೀಕರ ತಮ್ಮ ತಮ್ಮ ಪಾತ್ರಗಳಿಗೆ ಜೀವ ತುಂಬಿದ್ದಾರೆ. ವಸ್ತ್ರವಿನ್ಯಾಸ ನಾಟಕಕ್ಕೆ ಪೂರಕವಾಗಿದ್ದು, ಅಸ್ಸಾಂನ ಸಂಸ್ಕೃತಿಯ/ಪರಿಸರದ ಛಾಯೆ ಕಾಣುತ್ತಿತ್ತು ಹಾಗೆ ನಾಟಕಕ್ಕೆ ಅಳವಡಿಸಿದ ಸಂಗೀತ ಕೂಡ. ಸಣ್ಣ ಪುಟ್ಟ ತಾಂತ್ರಿಕ ಸಮಸ್ಯೆಗಳಿದ್ದರೂ ಒಟ್ಟಾರೆ ಒಂದು ಯಶಸ್ವಿ ಪ್ರಯೋಗ. ಮುಂಬರುವ ಪ್ರಯೋಗಗಳಲ್ಲಿ ಇನ್ನೂ ಪಕ್ವತೆ ಬರಲು ಸಾಧ್ಯವಿದೆ. ಅ

***ಶಿವಾನಂದ ಇಂಗಳೇಶ್ವರ***







ಒಂದು

ಕೈಯಲ್ಲಿದ್ದ 'ಸಾಯಿಸುತೆ' ಕಾದಂಬರಿಯನ್ನು ಬದಿಗಿಟ್ಟು ತಟ್ಟೆಯಲ್ಲಿದ್ದ ಹುರಿಗಾಳನ್ನೂ ಮರೆತು ಯೋಚನೆಯಲ್ಲಿ ಮುಳುಗಿದ್ದ ಸಾಗರಿಕ, ಅವಳಮ್ಮ ಸುಶೀಲಳ ಕರೆಯಿಂದ ಈ ಲೋಕಕ್ಕೆ ಬಂದಳು. "ಏನೇ ಸಾಗರಿಕ ಹೀಗೂ ಒಂದು ಆಲೋಚನೆಯಲ್ಲಿ ಮುಳುಗಿದ್ದೀಯ. ನಿನ್ನ ಇಂಜಿನಿಯರಿಂಗ್ ಕೂಡ ಡಿಸ್ಟಿಂಕ್ಷನ್‌ನಲ್ಲಿ ಆಯಿತು, ಸುರತ್ಕಲ್ ಇಂಜಿನಿಯರಿಂಗ್ ಕಾಲೇಜು, ಮನೆ ಹತ್ತಿರವೇ, ಕೆಲಸವೂ ಸಿಕ್ಕಿತು, ಕೈ ತುಂಬಾ ಸಂಬಳ ಎಣಿಸುತ್ತ ಹಾಯಾಗಿ ಓಡಾಡಿಕೊಂಡಿರುವುದನ್ನು ಬಿಟ್ಟು ಏನಿದು ಅಜ್ಜಮ್ಮನ ಹಾಗೆ ಕೂತಿದ್ದೀಯಾ" ಎಂದು ಮೆಲುವಾಗಿ ಗದರಿದರು. ಅದಕುತ್ತರವಾಗಿ ಹಾವಿನಂತೆ ಉದ್ದವಾಗಿ ಜೊಂಪಾಗಿ ಇದ್ದ ತನ್ನ ಜಡೆಯನ್ನು ಮುಂದೆ ಹಾಕಿಕೊಂಡು ಉಗುರು ಕಚ್ಚಿ ಅಮ್ಮನನ್ನೇ ನೋಡುತ್ತಾ ಸಾಗರಿಕ ಕೇಳಿದ್ದು, "ಅಮ್ಮ ಇಬ್ಬರಲ್ಲಿ ನಿನಗ್ಯಾರಮ್ಮ ಇಷ್ಟ ವಿಕಾಸನೋ, ಅವಿನಾಶನೋ ಯಾರು ಹೇಳಮ್ಮ" ಎಂದು. ಅದಕುತ್ತರ ಕೊಡದೆ ಅವಳನ್ನೇ ಒಮ್ಮೆ ದೀರ್ಘವಾಗಿ ದಿಟ್ಟಿಸಿ ನೋಡಿದ ಸುಶೀಲಾಳಿಗೆ ಒಂದು ಕ್ಷಣ ಅವಳ ಮಗಳ ಬಗ್ಗೆ ಅವಳಿಗೇ ಹೆಮ್ಮೆ ಎನಿಸಿತು. ಅಬ್ಬಾ ಎಷ್ಟೊಂದು ಚೆನ್ನಾಗಿದ್ದಾಳೆ. ಆ ಹೊಂಬಣ್ಣ ನೀಳವಾದ ಮೂಗು ಶಿಲಾಬಾಲಿಕೆಯಂತ ಮೈ ಮಾಟ, ಇಷ್ಟು ಸಾಲದು ಎಂಬಂತೆ ಎದುರಿನವರ ಅಂತರ್ಯವನ್ನು ಹೊಕ್ಕು ನೋಡುವಂಥ ಆ ಬಟ್ಟಲುಗಣ್ಣುಗಳು. ಯಾವ ರಾಜಕುಮಾರ ಇವಳನ್ನು ಹಾರಿಸಿಕೊಂಡು ಹೋಗಲು ಕಾದಿದ್ದನೋ ಎಂದೆನಿಸಿ ನಗು ಬಂತು. ಮರುಕ್ಷಣವೇ ಹಾಂ ಅದೇ ವಿಷಯಕ್ಕಲ್ಲವೇ ಈಗ ಮನೆಯಲ್ಲಿ ಇಷ್ಟು ಮೌನ ಆವರಿಸಿರುವುದು ಎಂದು ನೆನಪಾಗಿ ಅವರ ಮುಖವೂ ಒಂದು ಕ್ಷಣ ಚಿಕ್ಕದಾಯಿತು. ಇದಕ್ಕೆ ಸಂಬಂಧಪಟ್ಟಂತೆ ಕಳೆದ ಒಂದೆರಡು ವಾರದಿಂದ ನಡೆದ ಘಟನೆಗಳು ಅವರ ಮನ ಪಟಲದಲ್ಲಿ ಹರಿದು ಹೋದವು.

ಸಾಗರಿಕ ತಂದೆ ತಾಯಿಗೆ ಒಬ್ಬಳೇ ಮಗಳು. ಒಬ್ಬಳೆಂದು ತಂದೆ ತಾಯಿ ಕೊಟ್ಟ ಸಲುಗೆಯನ್ನು ಅವಳೆಂದೂ ದುರುಪಯೋಗ ಪಡಿಸಿಕೊಂಡಿರಲಿಲ್ಲ. ಅಮ್ಮ ಸುಶೀಲಳ ಚೆಲುವು ಮತ್ತು ಅಪ್ಪ ಮೋಹನ್ ಬುದ್ಧಿವಂತಿಕೆಯ ಪ್ರತಿರೂಪವಾಗಿದ್ದ ಅವಳು ಚಿಕ್ಕಂದಿನಿಂದಲೂ ಓದು ಮತ್ತು ಆಟೋಟ ಎರಡರಲ್ಲೂ ಮುಂದು. ಅವಳಿದ್ದೆಡೆ ನಗು ತಮಾಷೆ ಹರಟೆ ಇರಲೇಬೇಕು. ಅವಳೆಂದರೆ ಎಲ್ಲರಿಗೂ ಇಷ್ಟವೇ. ಅವಳ ಈ ಗುಣಕ್ಕೆ ಜೊತೆಗಿರಲೆಂದು ಅವಳಿಗೆ ಸಂಗೀತ, ಸಿನಿಮಾ, ಕಥೆ-ಕಾದಂಬರಿಗಳ ಹುಚ್ಚು ಹಿಡಿಸಿದವನು ಅವಳಮ್ಮ ಸುಶೀಲನ ಅಣ್ಣ ಮಧುಕರನ ಮಗ ಅವಿನಾಶ್. ಚಿಕ್ಕಂದಿನಿಂದಲೂ ಒಟ್ಟಿಗೆ ಬೆಳೆದ ಅವರಿಬ್ಬರಲ್ಲಿ ವಿಶೇಷ ಸಲುಗೆ ಪ್ರೀತಿ ಇತ್ತು. ಅವಿನಾಶನೇನು ಇವಳಂತೆ ಬೆಳ್ಳಗೆ ಅಂದವಾಗಿರದಿದ್ದರೂ ಗೋಧಿ ಬಣ್ಣದವನಾಗಿದ್ದು ಲಕ್ಷಣವಾಗಿದ್ದ. ಅವನ ತೀಕ್ಷ್ಣವಾಗಿದ್ದ ಕಣ್ಣು ನೀಳವಾಗಿದ್ದ ಮೂಗು, ಸಾಲದ ಹಲ್ಲುಗಳು ಅವನ ಮುಖಕ್ಕೆ ಒಂದು ಶೋಭೆ ನೀಡುತ್ತಿತ್ತು. ಅವಿನಾಶ್ ಅಪ್ರತಿಮ ಗಾಯಕ ಕೂಡ. ಅವನು ಹಾಡಲು ನಿಂತರೆ ಆ ಧ್ವನಿಗೆ ಮನಸೋಲದವರೇ ಇರಲಿಲ್ಲ. ಹಾಡಿಗೆ ಜೀವ ತುಂಬಿ ಹಾಡುತ್ತಿದ್ದ ಅವನ ಹಾಡಿನ ಮೋಡಿಗೆ ಒಳಗಾದವರಲ್ಲಿ ಸಾಗರಿಕಳೂ ಒಬ್ಬಳು. ತುಂಬು ಭಾವುಕಜೀವಿಯಾದ ಅವನು ಸಾಗರಿಕಳನ್ನು ಚಿಕ್ಕಂದಿನಿಂದಲೂ ತನ್ನ ಜೀವಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದ. ಎಲ್ಲರಂತೆ ಡಾಕ್ಟರ್ ಇಂಜಿನಿಯರ್ ಆಗಲು ಇಷ್ಟ ಪಡದ ಅವನು ತನಗಿಷ್ಟವಾದ ಸಾಹಿತ್ಯದಲ್ಲೇ ಪದವಿ ಮಾಡಿ ಅವರಪ್ಪನಿಂದ ಬಂದ ಜಮೀನು ತೋಟ ನೋಡಿಕೊಂಡಿದ್ದ. ಅವನು ಬಿ.ಎ. ಕಡೆ ವರ್ಷದಲ್ಲಿ ಇದ್ದಾಗಲೇ ಅವರಪ್ಪ ಹೃದಯಾಘಾತದಿಂದ ಮರಣ ಹೊಂದಿದ್ದರಿಂದ ಮನೆಗೆ ಅವನೇ ಆಸರೆಯಾಗಿದ್ದ. ಅವನಿಗೆ ತನ್ನ ಜಮೀನು ತೋಟ, ಗಿಡ, ಮರಗಳೆಂದರೆ ಬಹು ಪ್ರೀತಿ. ಆಧುನಿಕ ರೀತಿಯ ವ್ಯವಸಾಯ ಪದ್ಧತಿಗಳನ್ನು ಮೈ ಗೂಡಿಸಿಕೊಂಡು ಚೆನ್ನಾಗಿ ಬೆಳೆ ಬೆಳೆಯುತ್ತಿದ್ದರಿಂದ ಅವನ ಆಸ್ತಿ ಈಗಾಗಲೇ 5-6 ಕೋಟಿಗಳಷ್ಟಾಗಿತ್ತು. ಅವನೂ ಸ್ವಂತ ಕಾರು, ಮನೆ ಎಲ್ಲ ಮಾಡಿಕೊಂಡು ಚೆನ್ನಾಗಿಯೇ ಇದ್ದ. ಪುಸ್ತಕಗಳ ಗೀಳು ಅವನಿಗೆ ಬಂದಿದ್ದು ಅವರಮ್ಮ ವನಜಳಿಂದ. ಆಕೆಗಾಗಿ ಚಿಕ್ಕಂದಿನಲ್ಲಿ ಲೈಬ್ರೆರಿಯಿಂದ ಪುಸ್ತಕ ತಂದು ಕೊಡುತ್ತಿದ್ದ. ಅವನು ಕ್ರಮೇಣ ತಾನು ಓದಲು ಶುರು ಮಾಡಿ ಈಗಾಗಲೇ ಅವರ ಊರಿನ ಲೈಬ್ರೆರಿಯ ಮುಕ್ಕಾಲು ಭಾಗ ಪುಸ್ತಕಗಳನ್ನೂ ಓದಿಯಾಗಿತ್ತು. ಇಷ್ಟಲ್ಲದೆ ಕೆಲವು ವರ್ಷಗಳಿಂದ ಅವನ ಮನೆಯಲ್ಲಿಯೇ ಪುಸ್ತಕಗಳನ್ನು ಖರೀದಿಸಿ ಸೇರಿಸಲು ಶುರು ಮಾಡಿ ಅದು ಈಗಾಗಲೇ ನಾಲ್ಕೈದು ಕಪಾಟುಗಳಿಗೆ ಆಗುವಷ್ಟಾಗಿತ್ತು. ಸಾಗರಿಕಳಂತೂ ಭಾನುವಾರ ಅವನ ಮನೆಯಲ್ಲೇ ಇರುತ್ತಿದ್ದುದು ಯಾವುದಾದರೂ ತನಗಿಷ್ಟವಾದ ಹೆಚ್.ಜಿ. ರಾಧಾದೇವಿಯೋ, ಯಂಡಮೂರಿಯೋ, ತ್ರಿವೇಣಿಯೋ ಇವರೆಲ್ಲರ ಪುಸ್ತಕವೊಂದು ಕೈಗೆ ತೆಗೆದುಕೊಂಡು ಕುಳಿತು ಬಿಟ್ಟರೆ ವನಜ ಕೊಡುವ ತಿಂಡಿಯ ಕಡೆ ಅವಳಿಗೆ ಗಮನವೇ ಇರುತ್ತಿರಲಿಲ್ಲ. ಕೆಲ ಭಾನುವಾರ ಅವಿನಾಶ್ ಸಹ ಪುರುಸೊತ್ತು ಮಾಡಿಕೊಂಡು ಮನೆಯಲ್ಲೇ ಎದ್ದಾಗ ಅವರಿಬ್ಬರ ಮಾತು ಕಥೆ,ಚರ್ಚೆಯಲ್ಲಿ ಮನೆ ತುಂಬಿ ಹೋಗುತ್ತಿತ್ತು.

ಯಾವುದಾದರು ಕಾದಂಬರಿಯ ಪಾತ್ರದ ಬಗೆ ಚರ್ಚೆ ಶುರು ಮಾಡಿದರೆ ಅದು ಸರಿ ಅವನು ಹಾಗೆ ಮಾಡಬಾರದಾಗಿತ್ತು ಎಂತಲೋ ಅಥವಾ ಕಥಾ ನಾಯಕಿ ದುಡುಕಿದಳೋ ಎಂತಲೋ ಇಬ್ಬರೂ ದಣಿಯುವ ತನಕ ಚರ್ಚೆ ಮಾಡುತ್ತಿದ್ದರು. ಕೆಲವೊಮ್ಮೆ ಈ ಮಾತಿನ ಮಧ್ಯೆ ಅವನು ಹಾಕುತ್ತಿದ್ದ ಕೆಲವು ಕನ್ನಡ ಚಿತ್ರಗೀತೆಗಳು ಅವಳನ್ನು ಮೈ ಮರೆಯುವಂತೆ ಮಾಡುತ್ತಿತ್ತು. ಅದರಲ್ಲೂ ಪುಟ್ಟಣ್ಣ ಕಣಗಾಲ್ ಚಿತ್ರಗಳಾದ ಶರಪಂಜರ, ಶುಭ ಮಂಗಳ, ಗೆಜ್ಜೆ ಪೂಜೆ ಈ ಚಿತ್ರದ ಹಾಡುಗಳು ಬಹುಶಃ ಅವಳಷ್ಟು ಬಾರಿ ಯಾರು ಕೇಳಿರಲಿಕ್ಕಿಲ್ಲ. ಒಟ್ಟಿನಲ್ಲಿ ಅವಳ ಪಾಲಿಗೆ ಅವಿನಾಶ್ ಒಬ್ಬ ಪ್ರತಿ ವಾರ ಜೀವ ತುಂಬುವ ಟಾನಿಕ್ ಆಗಿದ್ದು ಸುಳ್ಳಲ್ಲ. ಅವನೊಂದಿಗೆ ಕಳೆದ ಮಧುರ ಗಳಿಗೆಗಳ ನೆನಪಿನಲ್ಲಿ ಅವಳು ಸೋಮವಾರದಿಂದ ಶುರು ಆಗುತಿದ್ದ ಕಾಲೇಜ್ ಕೆಲಸವನ್ನು ಹುರುಪಿನಿಂದ ನಿಭಾಯಿಸುತ್ತಿದ್ದಳು. ಒಟ್ಟಿನಲ್ಲಿ ಅವನಿಲ್ಲದ ಜೀವನವನ್ನು ಅವಳ ಕೈಲಿ ಊಹಿಸಲೂ ಆಗುತ್ತಿರಲಿಲ್ಲ.

ಎಲ್ಲಾ ಹೀಗೆ ನಡೆದುಕೊಂಡು ಹೋಗಿದ್ದರೆ ಬಹುಶಃ ಸಾಗರಿಕ ಅವಿನಾಶನ ಮಡದಿಯಾಗಿ ಸಂತೃಪ್ತಿಯಿಂದ ಇರುತ್ತಿದ್ದಳೇನೋ, ಆದರೆ ನೆಮ್ಮದಿಯಾಗಿದ್ದ ಅವರ ಜೀವನದಲ್ಲಿ ಕಂಪನ ಎಬ್ಬಿಸಲು ಬಂದಂತೆ ಬಂದವನೇ ದಿವಾಕರ. ಅವನು ಸುಶೀಲಳ ಮತ್ತೊಬ್ಬ ಅಣ್ಣ. ಸಾಗರಿಕ ಹತ್ತು ವರ್ಷದವಳಾಗಿದ್ದಾಗಲೇ ಭಾರತ ಬಿಟ್ಟು ದುಬೈಗೆ ಕೆಲಸಕ್ಕೆ ಹೋಗಿ ಅಲ್ಲೇ ಸೆಟ್ಲ್ ಆಗಿದ್ದ. ದಿವಾಕರ ಚೆನ್ನಾಗಿ ಆಸ್ತಿಯನ್ನೇನೋ ಮಾಡಿದ್ದ, ಮಗ ವಿಕಾಸನು ಕೂಡ ಅಪ್ಪನ ಬಿಸಿನೆಸ್ ನೋಡಿಕೊಳ್ಳುತ್ತಿದ್ದ. ಅವನಿಗೆ ಹೆಣ್ಣು ಹುಡುಕುತ್ತಿದ್ದಾಗಲೇ ಪಕ್ಕನೆ ನೆನಪಾಗಿದ್ದು ಸುಶೀಲಳ ಮಗಳು ಸಾಗರಿಕ. ಚಿಕ್ಕಂದಿನಲ್ಲಿಯೇ ಅವಳ ಅಂದಕ್ಕೆ ಬೆರಗಾಗಿದ್ದ ದಿವಾಕರ ಅವಳನ್ನೂ ಒಮ್ಮೆ ಮಗನಿಗೆ ನೋಡೋಣ ಎಂದು ಈ ಬಾರಿ ರಜೆಗೆ ಬೆಂಗಳೂರಿಗೆ ಬಂದವರು ಮಂಗಳೂರಿನ ತಂಗಿಯ ಮನೆಗೂ ಮಗನೊಂದಿಗೆ ಬಂದರು. ವಿಕಾಸನನ್ನು ನೋಡುತ್ತಲೇ ಸಾಗರಿಕಾಳಿಗೆ ಮಸುಕು ಮಸುಕಾಗಿ ಅವನೊಂದಿಗೆ ಚಿಕ್ಕಂದಿನಲ್ಲಿ ರಜಕ್ಕೆಂದು ಮನೆಗೆ ಬಂದಾಗ ಆಡುತಿದ್ದ ದಿನಗಳು ನೆನಪಿಗೆ ಬಂದಿತು. ಹಾಲು ಬಿಳುಪಿನ ಬಣ್ಣದವನಾಗಿದ್ದ ವಿಕಾಸ್ ಈಗಂತೂ ತೆಂಗಿನ ಮರದಂತೆ ಎತ್ತರ ಬೆಳೆದು ಹಿಂದಿ ಫಿಲಂ ಹೀರೋ ಅಂತೆಯೇ ಕಾಣುತ್ತಿದ್ದ. ಅವಳಿಗಂತೂ ಅವನನ್ನು ಎಷ್ಟು ನೋಡಿದರು ಕಮ್ಮಿ ಎನ್ನಿಸುತ್ತಿತ್ತು. ವಿಕಾಸನಿಗೂ ದಂತದ ಬೊಂಬೆಯ ಹಾಗಿದ್ದ ಅವಳು ಕ್ಷಣದಲ್ಲಿ ಇಷ್ಟವಾದಳು.

ದಿವಾಕರ್ ರಾಯರು ಹೆಚ್ಚು ಸಮಯ ವ್ಯರ್ಥ ಮಾಡದೇ ಸಾಗರಿಕಳನ್ನು ತಮ್ಮ ಮಗನಿಗೆ ತಂದು ಕೊಳ್ಳುವ ಇಚ್ಛೆಯನ್ನು ವ್ಯಕ್ತಪಡಿಸಿದರು. ಸಾಗರಿಕಳ ಅಪ್ಪ ಮೋಹನನಿಗೂ ಬೇಡ ಎನ್ನಲೂ ಯಾವ ಕಾರಣವೂ ಇರಲಿಲ್ಲ! ಆದರೆ ಮಗಳ ಇಂಗಿತ ನೋಡೋಣ ಅವಳತ್ತ ತಿರುಗಿ ಏನು ಎಂದು ನೋಡಿದಾಗ ಸಾಗರಿಕ ಕೂಡ ನನಗೆ ಒಪ್ಪಿಗೆ ಎನ್ನುವಂತೆ ತಲೆ ಆಡಿಸಿದಳು. ದುಬೈನ ವೈಭವದ ಜೀವನ ತನ್ನದಾಗುವುದು ಜೊತೆಗೆ ವಿಕಾಸ ಕೂಡ ಬಹಳ ಚೆನ್ನಾಗಿದ್ದಾನೆ ಹುಂ ನಾನೇ ಅದೃಷ್ಟವಂತೆ ಎಂದು ಹಿಗ್ಗಿದ ಸಾಗರಿಕ ಮದುವೆಗೆ ತನ್ನ ಸಂಪೂರ್ಣ ಒಪ್ಪಿಗೆಯನ್ನು ಸೂಚಿಸಿದಳು. ಇನ್ನು ಮದುವೆಯ ಡೇಟ್ ಫಿಕ್ಸ್ ಮಾಡುವುದೊಂದೇ ಬಾಕಿ. ಬೆಂಗಳೂರಿನಲ್ಲಿ ತಮ್ಮವರೆಲ್ಲರನ್ನೂ ನೋಡಿ ಒಂದೆರಡು ದಿನ ಇದ್ದು ವಾಪಸು ಬಂದ ಮೇಲೆ ಈ ಕೆಲಸ ಮಾಡೋಣ ಎಂದು ಹೋದ ದಿವಾಕರ್ ಕಾರಣಾಂತರದಿಂದ ಒಂದು ವಾರದವರೆಗೆ ಮತ್ತೆ ಮಂಗಳೂರಿಗೆ ಬರಲಾಗಲಿಲ್ಲ.

ಈ ನಡುವೆ ಎಂದಿನಂತೆ ಭಾನುವಾರ ಹಾರುತ್ತ ತನ್ನ ಸ್ಕೂಟರ್‌ನಲ್ಲಿ ಅವಿನಾಶ್ ಮನೆ ತಲುಪಿದ ಸಾಗರಿಕಳಿಗೆ ಅವನಮ್ಮ ವನಜಾಳಿಂದ ಅವನು ಗದ್ದೆಗೆ ಹೋಗದೆ ಮನೆಯಲ್ಲೇ ಇರುವುದು ತಿಳಿದು ಖುಷಿಯಾಯಿತು. ಕುರ್ಚಿಯಲ್ಲಿ ಕುಳಿತಿದ್ದ ಅವನನ್ನು ಅಚ್ಚರಿಪಡಿಸಬೇಕೆಂದು ಮೆಲ್ಲನೆ ಹಿಂದಿನಿಂದ ಹೋಗಿ ಕಣ್ಣು ಮುಚ್ಚಿದ ಅವಳಿಗೆ ಕೈ ಎಲ್ಲಾ ತೇವವಾಯಿತು. ಕೂಡಲೇ

ಕೈ ಎಳೆದುಕೊಂಡ ಅವಳು ಗಾಬರಿಯಿಂದ "ಏನಾಯ್ತೋ ಯಾಕೆ ಈ ಪಾಟಿ ಕಣ್ಣೀರು" ಎಂದಳು. ಅವಳನ್ನು ನೋಡಿ ದಿಗ್ಭ್ರಮೆಯಿಂದ ಎದ್ದ ಅವಿನಾಶ್ ಕೂಡಲೇ ಕಣ್ಣೊರೆಸಿಕೊಂಡು ಪೇಲು ಪೇಲಾಗಿ ನಕ್ಕ, "ಹೇ ಹೇ ಏನಿಲ್ಲ ನಿನಗೆ ಮದುವೆ ಗೊತ್ತಾಯ್ತಂತಲ್ಲ ಇನ್ನೇನು ನಮ್ಮನೆಲ್ಲ ಬಿಟ್ಟು ಹೋಗಿ ಬಿಡ್ತೀಯಾ ಅದಕ್ಕೆ ದು:ಖ ಆಯಿತು" ಎಂದ. ಅವಳಿಗೂ ಒಂದು ಕ್ಷಣ ಕಸಿವಿಸಿಯಾದರೂ ಎಳೆತನದ ಸಲಿಗೆಯಿಂದ "ಹೌದೋ ವಿಕಾಸ ಈಗ ಎಷ್ಟು ಚೆನ್ನಾಗಿದ್ದಾನೆ ಗೊತ್ತಾ ಒಳ್ಳೆ ಕೆಂಪಗೆ ಹೀರೋ... ಹೀರೋ.. ಇದ್ದ ಹಾಗಿದ್ದಾನೆ. ಜೊತೆಗೆ ಫಾರಿನ್ ಲೈಫ್ ಸುತ್ತಾಟ ಇವೆಲ್ಲ ಬೇರೆ, ನಾನೇ ಅದೃಷ್ಟವಂತಳು ಅಲ್ವ" ಎಂದಳು. ಅದಕ್ಕವನು ಕ್ಷೀಣವಾಗಿ ಹೌದು, ಸಾಗರಿಕ ನೀನು ಚಿಕ್ಕಂದಿನಿಂದಲೂ ಅದೃಷ್ಟವಂತೆಯೇ ನಾನೇ ದುರುದೃಷ್ಟವಂತ ನಿನ್ನಂತಹ ಗೆಳತಿಯನ್ನು ಕಳೆದುಕೊಳುತ್ತಿದ್ದೇನೆ ಎಂದ. ಅವಳಿಗ್ಯಾಕೊ ಅವನ ಧ್ವನಿ ಅದರಲ್ಲಿದ್ದ ನೋವನ್ನು ಗಮನಿಸಿ ಇವನೇನಾದರೂ ನನ್ನ ಪ್ರೀತಿ ಮಾಡುತ್ತಿಲ್ಲವಷ್ಟೆ ಎಂದು ಕೊಂಡಳು, ಮರುಕ್ಷಣವೇ ಅಯ್ಯೋ ನಾನೆಲ್ಲಿ, ಇವನೆಲ್ಲಿ ಇಂಜಿನಿಯರಿಂಗ್ ಓದಿ ಕೈ ತುಂಬಾ ದುಡಿಯುತ್ತಿರುವ ನನಗೆ ಇಂಜಿನಿಯರಿಂಗ್ ಮಾಡಿ ಬಿಸಿನೆಸ್ ಮಾಡುತ್ತಿರುವ ವಿಕಾಸ್ ಸರಿ. ಇವನು ನೋಡಲೂ ಸುಮಾರು ಜೊತೆಗೆ ಪೇಟೆಯವರಂತಲ್ಲ, ಇಲ್ಲೆಲ್ಲೋ ಹೊಲ ಗದ್ದೆ ಅಂತ ಇದ್ದಾನೆ, ನನ್ನ ಬಗ್ಗೆ ಇವನೂ ಕನಸ ಕಾಣಲಾರ ಎಂದು ಸಮಾಧಾನ ಪಟ್ಟುಕೊಂಡಳು. ಆದರೆ ಅವಳೆಣಿಕೆಗೆ ವಿರುದ್ಧವಾಗಿ ಭಾವನಾತ್ಮಕ ಜೀವಿಯಾದ ಅವಿನಾಶ್ ತನ್ನ ಭಾವನೆಯನ್ನು ನಿಯಂತ್ರಣ ಮಾಡಲಾಗದೆ ಅವಳ ಕೈ ಹಿಡಿದುಕೊಂಡು "ಸಾಗರಿಕ ನೀನು ಏನಾದರು ಅಂದುಕೋ ನೀನಿಲ್ಲದೆ ನಾನಿರಲಾರೆ ದಯವಿಟ್ಟು ವಿಕಾಸ್ ಬಿಟ್ಟು ನನ್ನಷ್ಟೇ ಮದುವೆ ಆಗುತ್ತೀಯ" ಎಂದ.

**ಎರಡು**

ಅವನ ಪ್ರೀತಿ, ನಿವೇದನೆ ಎಲ್ಲಾ ಅವಳಿಗಿಷ್ಟವಾದರೂ ಅದೇಕೋ ಒಂದು ಕ್ಷಣ ಆ ಹಳ್ಳಿಯ ಜೀವನ ನೆನಸಿ ಮನಸ್ಸು ಪಿಚ್ಚೆನಿಸಿತು, ಅದನ್ನವನಿಗೆ ಬಿಡೆಯಿಲ್ಲದೆ ಹೇಳಿಯೂ ಬಿಟ್ಟಳು. "ನೋಡು ಅವಿನಾಶ್ ನೀನೆಂದರೆ ನನಗೂ ತುಂಬಾ ಇಷ್ಟ ಒಂದು ವೇಳೆ ನಾನು ನಿನ್ನ ಮೇಲಿನ ಪ್ರೀತಿಯಿಂದ ನಿನ್ನನ್ನು ಒಪ್ಪಿಕೊಂಡರೂ ಈ ಕೊಂಪೆಯಲ್ಲಿರಲು ನನ್ನಿಂದ ಸಾಧ್ಯವಿಲ್ಲ ನೀನೇದರೂ ಬೆಂಗಳೂರಿನಲ್ಲೋ ಮಂಗಳೂರಿನಲ್ಲೋ ಮನೆ ಮಾಡುವ ಹಾಗಿದ್ದರೆ ಹೇಳು ನಾನು ರೆಡಿ" ಎಂದಳು. ಅದಕ್ಕೆ ಕೂಡಲೇ ಮುಖ ತಿರುಗಿಸಿದ ಅವಿನಾಶ್ ನೋವಿನಿಂದ, "ಅದನೊಂದು ಬಿಟ್ಟು ಬೇರೆ ಏನಾದರು ಹೇಳು ಸಾಗರಿಕ ಮಾಡುತ್ತೇನೆ. ಆದರೆ ನನಗೆ ಈ ಮಣ್ಣನ್ನು ಬಿಟ್ಟು ಬೇರೆ ಕಡೆ ಹೋಗಲು ಇಷ್ಟವಿಲ್ಲ. ಇದಿಲ್ಲದೆ ನಾನು ಬದುಕುವುದಿಲ್ಲ ಎಂದು ಹೇಳುವುದಿಲ್ಲ, ಸಿಟಿಯಲಿದ್ದು ಚೆನ್ನಾಗಿ ಬದುಕುವಷ್ಟು ಜಾಣ್ಮೆ ನನ್ನಲಿದೆ ಆದರೆ ನನಗೇಕೋ ಈ ಪ್ರಕೃತಿ ಈ ತಂಪಾದ ಗಾಳಿ, ನಮ್ಮ ಹಳ್ಳಿಯ ಜನರು ಈ ಪ್ರೀತಿ ಇದೆಲ್ಲ ಬಿಟ್ಟು ಬರಲು ಮನಸಿಲ್ಲ ನನ್ನ ಬದುಕು, ಕೊನೆ ಎಲ್ಲಾ ಇಲ್ಲೇ. ನೀನೆ ದಯವಿಟ್ಟು ಮನಸ್ಸು ಬದಲಿಸು" ಎಂದ. ಅವಳ ಮನಸ್ಸು ಅವನ ಮೇಲಿನ ಅದಮ್ಯ ಪ್ರೀತಿಯಿಂದಾಗಿ ಒಂದಿಷ್ಟು ಹೊಯ್ದಾಡಿತು. ಆದರೆ ವಿಕಾಸನ ನೆನಪಾದೊಡನೆ ದುಬೈ ಎಲ್ಲಾ ನೆನಪಿಗೆ ಬಂತು. ಅವಳು ಅವಿನಾಶನಿಗೆ ಹೇಳಿದಳು "ಎಲ್ಲಾ ಸರಿ ಅವಿನಾಶ್ ನನಗೆ ದುಬೈ, ಫ್ರಾನ್ಸ್ ಅಂತಹ ಫಾರಿನ್ ದೇಶಗಳನ್ನು ಸುತ್ತಬೇಕೆಂದಿದೆ ಕಣೋ" ಎಂದಳು. ಅದಕ್ಕವನು ನಕ್ಕು, "ಹುಚ್ಚಿ ನಾನು ಕಲಿತವನು ಹಣ ಕಾಸು ಇರುವವನು ವರ್ಷಕ್ಕೊಂದೆರಡು ಫಾರಿನ್ ಟೂರ್ ನಿನಗೆ ಮಾಡಿಸುವುದು ನನಗೇನೂ ಕಷ್ಟವಿಲ್ಲ. ಆದರೆ ನೀನು ವಿಕಾಸ ಅನ್ನು ಮದುವೆಯಾದ ಮೇಲಿನ ನಿನ್ನ ದುಬೈ ಜೀವನ ನೆನೆಸಿಕೋ. ಓಡಾಟ ಎಲ್ಲಾ ನಾಲ್ಕು ದಿನ ಚೆನ್ನಾಗಿಯೇ ಇರುತ್ತೆ ಆದಾದ ಮೇಲೆ ನೀವಿಬ್ಬರೇ ಇದ್ದಾಗ ನಿನ್ನ ಹವ್ಯಾಸಗಳೂ ಇಷ್ಟಾನಿಷ್ಟಗಳೂ ಅವನಿಗೆ ಇಷ್ಟವಾಗಬಹುದೇ ಎಂದು ಯೋಚಿಸಿದ್ದಿಯ. ಇಲ್ಲಿ ಮರಗಿಡಗಳ ನಡುವೆ ಹಾಯಾಗಿ ಬೆಳೆದ ನಿನಗೆ, ಅಲ್ಲಿ ಕಾಂಕ್ರೀಟ್ ಜಂಗಲ್‌ನಲ್ಲಿ ಉಸಿರುಕಟ್ಟುವ ಹಾಗಾಗಬಹುದು. ಹಾಗೆ ನಮ್ಮಿಬ್ಬರ ಬಗ್ಗೆಯೂ ಯೋಚಿಸು, ನಮ್ಮ ಹವ್ಯಾಸ ಹೆಚ್ಚು ಕಮ್ಮಿ ಒಂದೇ, ಜೀವನದ ಗುರಿ ಒಂದೇ, ಸಾಹಿತ್ಯ ಸಂಗೀತದ ಮೇಲಿನ ಆಸಕ್ತಿ ಕೂಡ ಸಮಾನಾಂತರಲ್ಲಿದೆ ಮದುವೆಯಾದ ಮೇಲೂ ನಮ್ಮ ನಡುವೆ ಅದು ಹಾಗೇ ಇರುತ್ತೆ. ನಿನ್ನ ನನ್ನ ಹವ್ಯಾಸ ಎಲ್ಲಾ ಹೆಚ್ಚು ಕಮ್ಮಿ ಒಂದೇ ಆಗಿರುವದರಿಂದ ನಾವಿಬ್ಬರೂ ಒಟ್ಟಿಗೆ ಸೇರಿದಾಗ ಹೊತ್ತು ಹೋಗುವುದೇ ತಿಳಿಯುವುದಿಲ್ಲ. ಈಗಲೇ ನೋಡು ಇಷ್ಟರವರೆಗೆ ನಡೆದಿರುವುದು, ನಡೆಯುತ್ತಿರುವುದೆಲ್ಲ ಜೀವನದ ಒಂದು ಸುಂದರವಾದ ಹಾಡಿನ ಹಾಗೆ ಇದೆ ಮುಂದೆಯೂ ಇರುತ್ತದೆ" ಎಂದ. ಅವಳಿಗೂ ಅವನೊಂದಿಗೆ ಪ್ರತಿ ಭಾನುವಾರ ಕಳೆಯುತ್ತಿದ್ದ ಮಧುರವಾದ, ಗಳಿಗೆಗಳು ನೆನಪಿಗೆ ಬಂದು ಅವನು ಹೇಳುವುದರಲ್ಲೂ ಸತ್ಯವಿದೆ ಎಂದೆನ್ನಿಸಿತು. ಆದರೂ ಕೂಡಲೇ ಏನನ್ನೂ ಹೇಳಲಾರದೆ, "ಆಯ್ತು ಕಣೋ ಯಾವುದಕ್ಕೂ ಯೋಚನೆ ಮಾಡುತ್ತೇನೆ" ಎಂದು ಹೇಳಿ ಮನೆಗೆ ವಾಪಸ್ಸು ಬಂದಳು.

ಮನೆಯಲ್ಲಿ ಊಟಮಾಡಿ ಇನ್ನೇನು ಅವಳ ಇಷ್ಟದ ಸಾಯಿಸುತೆ ಕಾದಂಬರಿ ಹಿಡಿಯಬೇಕು ಎನ್ನಿಸುವಷ್ಟರಲ್ಲಿ ಕಾರಿನ ಶಬ್ದವಾಯ್ತು, ನೋಡಿದರೆ ವಿಕಾಸ್. ಕಾರಿನಿಂದ ಇಳಿದು ನೀಲಿ ಬಣ್ಣದ ಸೂಟಿನಲ್ಲಿ ಮನ್ಮಥನಂತೆ ಬಂದ ಅವನನ್ನು ನೋಡಿ ಅವಳ ಹೃದಯ ಬಡಿತ ಒಂದು ಕ್ಷಣ ನಿಂತಿತು. ಎದುರು ಸಿಕ್ಕಿದ ಇವಳಮ್ಮನ ಕ್ಷೇಮ ವಿಚಾರಿಸಿ ಅವಳ ಹತ್ತಿರ ಅವನು ಬಂದಾಗ ಅವನು ಹಾಕಿದ ಫರ್‌ಫ್ಯೂಮ್ ಪರಿಮಳ ಮೂಗಿಗೆ ಬಡಿದು ಅವಳಿಗೆ ಒಂದು ಕ್ಷಣ ಮತ್ತೇರಿದಂತಾಯ್ತು. ಸುಶೀಲಳಂತೂ ಸಡಗರದಿಂದ ಅವನನ್ನು ಉಪಚರಿಸಿದ್ದೆ ಉಪಚರಿಸಿದ್ದು. ಅವನೂ ತನ್ನ ಮೊಬೈಲ್‌ನಲ್ಲಿ ಅವಳಿಗೆ ತಾನು ಇತ್ತೀಚೆಗೆ ಪ್ರವಾಸ ಹೋಗಿದ್ದ ಆಸ್ಟ್ರೇಲಿಯಾದ ಫೋಟೋ ಎಲ್ಲಾ ತೋರಿಸಿ ಅವಳನ್ನು ಬೆರಗುಗೊಳಿಸಿದ. ಜೊತೆಗೆ ದುಬೈನ ಬುರ್ಜ್ ಖಲೀಫಾ, ಬುರ್ಜ್ ಅರಬ್, ಪಾಮ್ ಜುಮೇರಾ ಇತ್ಯಾದಿ ಟೂರಿಸ್ಟ್ ಜಾಗಗಳ ಫೋಟೋ ತೋರಿಸಿದಾಗ ಸಾಗರಿಕಳಿಗೆ ಸ್ವರ್ಗ ಅಲ್ಲೇ ಇರುವಂತೆ ಅನ್ನಿಸಿತು. ಈ ಬಾರಿ ಅವಳ ಮನಸೂ ಮತ್ತೆ ವಿಕಾಸನನ್ನೇ ಮದುವೆಯಾಗುವುದು ಎಂದು ತೀರ್ಮಾನಿಸಿತು. ಆದರೆ ಅವನು ಹೊರಟು ಹೋದ ಮೇಲೆ ಮತ್ತೆ ಕಾದಂಬರಿ ಓದುವಾಗ ಅದರಲ್ಲಿ ರಸಮಯವಾದ ಪ್ರಸಂಗವೊಂದು ಬಂದು ಅವಿನಾಶನ ನೆನಪಾಯಿತು. ಅವನು ಪಕ್ಕದಲ್ಲಿದ್ದಿದ್ದರೆ ಅವನೊಂದಿಗೆ ಇದರ ಬಗ್ಗೆ ಮಾತನಾಡಿ ಹರಟೆ ಹೊಡೆದು ರೇಗಿಸಬಹದಾಗಿತ್ತು ಎಂದೆನಿಸಿತು. ಕೂಡಲೇ ಮತ್ತೆ ಮದುವೆಯ ವಿಷಯ ನೆನಪಿಗೆ ಬಂದು ಅವಳಿಗೆ ಗೊಂದಲವಾಯಿತು. ಇದೇ ಅವಸ್ಥೆಯಲ್ಲಿರುವಾಗಲೇ ಅವಳಮ್ಮ ಅವಳನ್ನು ಎಚ್ಚರಿಸಿ ಈ ಲೋಕಕ್ಕೆ ತಂದಿದ್ದು.

**ಮೂರು**

ಎಷ್ಟು ಯೋಚಿಸಿದರೂ ಸುಶೀಲಾಳಿಗೆ ಸಹಾ ಇದಕ್ಕೆ ಪರಿಹಾರ ಏನು ಎಂದು ಹೊಳೆಯಲಿಲ್ಲ. ಒಬ್ಬಳೇ ಮಗಳಾದ್ದರಿಂದ ಆತುರದಲ್ಲಿ ದುಡುಕಿ, ಮುಂದೆ ಅವಳಿಗೆ ಇಷ್ಟವಾಗದ ಬದುಕಿಗೆ ಅವಳನ್ನು ದೂಡುವುದು ಅವಳಿಗೆ ಬೇಡವಾಗಿತ್ತು. ಒಂದೇ ಸಮನೆ ಯೋಚಿಸುತ್ತಿದ್ದಾಗ ಅವಳಿಗೆ ಕೂಡಲೇ ತನ್ನ ಗಂಡ ಮೋಹನ್ ನೆನಪಿಗೆ ಬಂದ. ಅಪಾರವಾದ ಬುದ್ಧಿಶಾಲಿ! ಅವನ ಬುದ್ಧಿಶಕ್ತಿಯೇ ಅಲ್ವೇ ಮಗಳಿಗೆ ಬಂದಿರುವುದು ಎಂದು ಮನಸ್ಸಿನಲ್ಲಿಯೇ ನಕ್ಕು ಹಾಂ ಅವರಿಗೆ ಹೇಳಿದರೆ ಏನಾದರೂ ದಿವೀನಾದ ಸಲಹೆ ಕೊಟ್ಟರು ಎಂದೆಣಿಸಿದಳು. ಈಗಂತೂ ಜೀವನದಲ್ಲಿ ಸಾಕಷ್ಟು ಸಮಸ್ಯೆಗಳನ್ನು ಎದುರಿಸಿ ಮಾಗಿರುವ ಮೋಹನ್ ಬಳಿ ಇದಕ್ಕೆ ಒಂದು ಒಳ್ಳೆ ಪರಿಹಾರ ಇದೆ ಎಂಬುವ ನಂಬಿಕೆ ಅವಳಿಗಿತ್ತು. ಮೋಹನ್ ಅವಳ ಭರವಸೆಯನ್ನು ಸುಳ್ಳು ಮಾಡಲಿಲ್ಲ, ಇವಳಿಂದ ವಿಷಯ ಎಲ್ಲಾ ತಿಳಿದು ಅವನು ಮಾಡಿದ ಮೊದಲ ಕೆಲಸ ಮಗಳನ್ನು ಕರೆದು ಕೇಳಿದ್ದು. "ಏನು ಸಾಗರಿಕ ನಿನಗೆ ಇಬ್ಬರೂ ಇಷ್ಟವೇ?" ಎಂದು. ಹೌದೆಂದು ಆಕೆ ತಲೆಯಾಡಿಸಿದಾಗ. ಒಂದೆರಡು ಕ್ಷಣ ಯೋಚಿಸಿದ ಮೋಹನ್, ತಾಯಿ ಮಗಳಿಬ್ಬರಿಗೂ ಹೇಳಿದ. "ನೋಡಿ ಈ ಸಮಸ್ಯೆ ಈಗ ಯಾಕೆ ಬಂದಿದೆ ಎಂದರೆ ಸಾಗರಿಕ ಅವಿನಾಶನನ್ನು ಹತ್ತಿರದಿಂದ ನೋಡಿದ್ದಾಳೆ ಅರಿತಿದ್ದಾಳೆ ಆದರೆ ವಿಕಾಸ್ ಬಗ್ಗೆ ಅವನ ಅಲ್ಲಿನ ಜೀವನದ ಬಗ್ಗೆ ಅವಳಿಗಿರುವುದು ಬೆಟ್ಟದಷ್ಟು ಆಸೆಯೇ ಹೊರತು ಅದು ಹೀಗೆ ಇದೆ ಎಂಬ ಸ್ಪಷ್ಟ ಅರಿವಿಲ್ಲ. ಇದನ್ನು ಹೋಗಲಾಡಿಸಿದರೆ ಅವಳೇ ಸ್ವತಃ ಯಾರು ಸರಿಯೆಂದು ತೀರ್ಮಾನಿಸಬಹುದು" ಎಂದ. ಸುಶೀಲಳಿಗೂ ಇದು ಸರಿ ಎಂದು ತೋರಿತು. ಆದರೆ ದುಬೈ ಬಗ್ಗೆ ವಿಕಾಸ್ ಬಗ್ಗೆ ಮದುವೆಯ ಮುಂಚೆಯೇ ತಿಳಿಯುವುದು ಹೇಗೆ ಎಂದಾಗ. ಅವರಿಬ್ಬರನ್ನು ನೋಡಿ ನಕ್ಕ ಮೋಹನ್ ಇದಕ್ಕೆ ಪರಿಹಾರ ಸಾಗರಿಕ ಮದುವೆಗೆ ಮುಂಚೆ ಅಲ್ಲಿ ಹೋಗಿ ಒಂದು ತಿಂಗಳಿದ್ದು ಸುತ್ತಾಡಿ ಬರುವುದು. ಅವಳಿಗಾಗಿ ನಾನು ಖರ್ಚು ಮಾಡಲು ರೆಡಿ. ಇನ್ನು ದಿವಾಕರನನ್ನು ಒಪ್ಪಿಸಬೇಕು. ಅದು ನಿನ್ನ

ಕೆಲಸ. ನಿನ್ನ ಅಣ್ಣ ಅಲ್ಲವೇ ಎಂದು ಸುಶೀಲಾಳತ್ತ ನೋಡಿದ. ಇದು ಕಷ್ಟ ಎನ್ನಿಸಿದರೂ ಮಗಳಿಗಾಗಿ ಕಲಿತ ಬುದ್ಧಿಯೆಲ್ಲಾ ಖರ್ಚು ಮಾಡಿದ ಅವಳು ದಿವಾಕರನನ್ನು ಒಪ್ಪಿಸಿದಳು.

ಸಾಗರಿಕ ಅವಿನಾಶನನ್ನು ಇಷ್ಟಪಟ್ಟಿದ್ದಾಳೆ ಅವನು ತನಗೆ ಪ್ರತಿಸ್ಪರ್ಧಿ ಎಂದು ಗೊತ್ತಾದ ವಿಕಾಸ್ ಮನಸ್ಸಿಗೆ ಕಿರಿ ಕಿರಿ ಆದರೂ, ಅವಳ ಕಡೇ ತೀರ್ಮಾನ ದುಬೈಗೆ ಬಂದು ಸುತ್ತಾಡಿ ಹೋದ ಮೇಲೆ ತೆಗುದುಕೊಳ್ಳುತ್ತಾಳೆ ಎಂದು ಗೊತ್ತಾಗಿ ನಿರಾಳವಾದ. ಎಲ್ಲಿಯ ಮಂಗಳೂರಿನ ಹತ್ತಿರದ ಹಳ್ಳಿಯ ಅವಿನಾಶ್ ಎಲ್ಲಿಯ ದುಬೈ ಒಮ್ಮೆ ನನ್ನೊಂದಿಗೆ ಅಲ್ಲೆಲ್ಲಾ ಅಡ್ಡಾಡಿದರೆ ಅವಳು ಈ ಜನ್ಮದಲ್ಲಂತೂ ಅವಿನಾಶ್‌ನ ಹಳ್ಳಿ ಕಡೆ ತಲೆ ಹಾಕಲಾರಳು ಎಂದು ಕೊಂಡು ಸಮಾಧಾನ ಪಟ್ಟುಕೊಂಡ. ವಿಶೇಷವೆಂದರೆ ವಿಕಾಸ್ ಅಪ್ಪ ದಿವಾಕರ್ ವಿಶಾಲ ಹೃದಯದವನಾದ್ದರಿಂದ ಸುಶೀಲ ಹೇಳಿದ್ದನ್ನು ತಪ್ಪಾಗಿ ಭಾವಿಸದೆ ಸಾಗರಿಕ ತಮ್ಮೊಂದಿಗೆ ಬಂದು ಒಂದು ತಿಂಗಳು ಇರಲು ಒಪ್ಪಿದ್ದು.

ಮತ್ತೊಂದು ವಾರದಲ್ಲಿ ಕಾಲೇಜ್‌ನಿಂದ ರಜೆ ತೆಗೆದು ವೀಸಾ, ಟಿಕೆಟ್ ಎಲ್ಲಾ ಮಾಡಿಸಿ ಸಾಗರಿಕ ದುಬೈಗೆ ಹಾರಿದ್ದಾಯ್ತು. ಮೊದಲೆರಡು ವಾರ ಅವಳನ್ನು ದುಬೈನ ಗ್ಲೋಬಲ್ ವಿಲೇಜ್, ಅಲ್ಕೈಫಾ ಟವರ್, ಜುಮೇರಾ ಬೀಚ್ ಎಲ್ಲಾ ಕಡೆ ಸುತ್ತಾಡಿಸಿದ ವಿಕಾಸ್ ಹೆಚ್ಚು ಕಮ್ಮಿ ಅವಳು ಅವಳ ಮನೆಯವರನ್ನು ಮತ್ತು ಇಂಡಿಯಾವನ್ನು ಮರೆಯುವಂತೆ ಮಾಡಿದ. ಆ ವೈಭವ, ಕಣ್ಣು ಕುಕ್ಕುವ ಆಗಸದೆತ್ತರದ ಟವರ್‌ಗಳು, ಸಬ್ಮೆರಿನ್, ಸಮುದ್ರದ ನೀರಿನಡಿ ರೆಸ್ಟೋರೆಂಟ್ ಒಂದೇ ಎರಡೇ. ಇದರೊಂದಿಗೆ ವಿಕಾಸನಂತ ಸುಂದರ ತರುಣನ ಜೊತೆ! ಎಲ್ಲಾ ಸುತ್ತಿ ಸಾಕಷ್ಟು ಕಣ್ ತಂಪಾಗಿಸಿಕೊಂಡ ಅವಳಿಗೆ ಸ್ವರ್ಗದಲ್ಲೇ ಇದ್ದೀನೇನೋ ಎಂಬ ಭಾವನೆ ಬಂತು. ವಿಕಾಸ್ ಕೂಡ ಕೈಗೆ ಎಲುಬಿಲ್ಲವೇನೋ ಎಂಬಂತೆ ಧಾರಾಳವಾಗಿ ದುಡ್ಡು ಖರ್ಚು ಮಾಡಿದ. ಅವಿನಾಶ್ ನೆನಪು ಅವಳಿಗೆ ಒಮ್ಮೆಯೂ ಆಗಲಿಲ್ಲ. ಅವಳನ್ನು ಪಡೆಯಲೇಬೇಕು ಎಂದು ಹಠಕ್ಕೆ ಬಿದ್ದವನಂತೆ ವಿಕಾಸ್ ಕೂಡ ಆ ಎರಡು ವಾರ ಬಿಸಿನೆಸ್ ಬಿಟ್ಟು ಸಂಪೂರ್ಣವಾಗಿ ಅವಳೊಂದಿಗೆ ಓಡಾಡಿಕೊಂಡಿದ್ದ. ಇಷ್ಟು ಸಾಲದು ಎಂಬಂತೆ ಮೂರನೇ ವಾರ ಈಜಿಪ್ಟ್ ಕೂಡ ಹೋಗಿ ಬಂದರು. ಇನ್ನು ಉಳಿದ ಒಂದು ವಾರ ಅವಳು ಮನೆಯಲ್ಲೇ ಇರಲಿ ಎಂದು ವಿಕಾಸ್ ಅಮ್ಮ ತಾಕೀತು ಮಾಡಿದ್ದರಿಂದ ಅವಳು ಮನೆಯಲ್ಲೇ ಉಳಿದಳು. ಈ ನಡುವೆ ಮನೆಯಲ್ಲಿ ಯಾರೂ ಅವಳನ್ನು ವಿಕಾಸ್ ಇಷ್ಟ ಆದನೇ ಎಂದು ಕೇಳುವ ಗೋಜಿಗೆ ಹೋಗಲಿಲ್ಲ ಅವರಿಗೆಲ್ಲ  ಚೆನ್ನಾಗಿ ಗೊತ್ತಿತ್ತು ಇಲ್ಲಿಯ ಓಡಾಟ, ನೋಟ, ವೈಭವ ಎಲ್ಲಾ ನೋಡಿದ ಮೇಲೆ ಅವಳು ಮರೆತಾದರೂ ಸಹಾ ಅವಿನಾಶ್ ಕಡೆ ಕಣ್ಣು ತಿರುಗಿಸಿಯೂ ನೋಡವುದಿಲ್ಲ ಎಂದು. ನಿಜಕ್ಕೂ ಸಾಗರಿಕಳ ಮನೋಸ್ಥಿತಿಯೂ ಹಾಗೆ ಇತ್ತು. ವಿಕಾಸ್ ಏನಾದರೂ ತಾಳಿ ಕಟ್ಟಲೆ ಎಂದರೆ ಅದೇ ಕ್ಷಣ ಕಟ್ಟು ಎಂದು ಕುತ್ತಿಗೆ ನೀಡಲು ಅವಳು ತುದಿಗಾಲಲ್ಲಿ ನಿಂತಿದ್ದಳು.

ಅವಳ ಕಡೆ ವಾರದ ಶುರುವಿನ ಒಂದೆರಡು ದಿನ ಅಂತಹ ವಿಶೇಷವೇನೂ ಆಗಲಿಲ್ಲ. ಮೂರನೆಯ ದಿನ ಅಲ್ಲೂ ಬರುತ್ತಿದ್ದ ಕನ್ನಡ ಸೀರಿಯಲ್ ಒಂದನ್ನು ನೋಡುತ್ತಿದ್ದ ಅವಳಿಗೆ ಅದರಲ್ಲಿ ಬರುತ್ತಿದ್ದ ಮಗನೇ ತಂದೆಯನ್ನು ಮನೆಯಿಂದ ಹೊರ ಹಾಕುವ ದೃಶ್ಯ ನೋಡಿ ಅಳುವೇ ಬಂದಿತ್ತು. ಈ ಮೂಡಿನಲ್ಲಿರುವಾಗಲೇ ಅವಳ ರೂಮಿಗೆ ಬಂದ ವಿಕಾಸ್ ಅವಳ ಕಣ್ಣಲಿ ನೀರನ್ನು ನೋಡಿ ಗಾಬರಿಯಿಂದ "ವಾಟ್ ಹ್ಯಾಪನ್‌ಡ್ ಸಾಗರಿಕ" ಎಂದ ಅವಳು ಕೂಡಲೇ "ನೋಡು ವಿಕಾಸ್ ಹೇಗೆ ಮಗ ತಂದೆಯನ್ನೇ..." ಎಂದಳು ಕೂಡಲೇ ಬಿದ್ದು ಬಿದ್ದು ನಕ್ಕ ಅವನು ಅಯ್ಯೋ ಅವರೇನೋ ಟಿ.ಆರ್.ಪಿ. ಹೆಚ್ಚಿಸಿಕೊಂಡು ಹಣ ಮಾಡಲು ಇಂಥ ಕಥೆ ತೆಗೆದು ಗಿಮಿಕ್ ಮಾಡುತ್ತಾರೆ, ನೀನೂ ಸರಿ ಇದ್ದೀಯ, ಅದನ್ನು ಬಂದ್ ಮಾಡಿ ಹೊರಡು ಒಂದು ರೌಂಡ್ ವಾಕ್ ಮಾಡಿ ಬರೋಣ ಎಂದ. ಅವಳಿಗೆ ಒಂದು ಕ್ಷಣ ಪಿಚ್ಚೆನಿಸಿ ನಾಚಿಕೆಯೂ ಆಯಿತು. ಕೂಡಲೇ ರೆಡಿಯಾಗಿ ಇಬ್ಬರೂ ವಾಕ್ ಹೋಗಿ ಬಂದರು ಆ ಸಮಯದಲ್ಲಿ ಅದೇ ಸೀರಿಯಲ್ ಬಗ್ಗೆ ಚರ್ಚಿಸೋಣ ಎಂದು ಅವಳಿಗನ್ನಿಸಿತು. ಆದರೆ ಮತ್ತೇನು ಹೇಳುತ್ತಾನೋ ಎಂದು ಸುಮ್ಮನಾದಳು. ಪಕ್ಕನೆ ಮನಸ್ಸಿನ ಮೂಲೆಯಲ್ಲೆಲ್ಲೋ ಅವಿನಾಶ್ ಆಗಿದ್ದರೆ ಇಂತಹ ವಿಷಯದಲ್ಲಿ ಎಷ್ಟು ಚೆನ್ನಾಗಿ ಚರ್ಚೆ ಮಾಡುತ್ತಿದ್ದ ಎಂದು ತುಲನೆ ಮಾಡಿತು. ಆದರೆ ಕೂಡಲೇ ಆ ಆಲೋಚನೆಯನ್ನು ಬದಿಗೆ ತಳ್ಳಿದಳು. ಮತ್ತೆರಡು ದಿನಗಳು ವಿಶೇಷವಿಲ್ಲದೆ ಕಳೆದು ಅವಳು ಹೊರಡುವ ದಿನವೂ ಹತ್ತಿರ ಬಂದಿತು. ಹೊರಡುವ ಹಿಂದಿನ ದಿನ ಬೆಳ್ಳಿಗ್ಗೆ ತಿಂಡಿ ತಿಂದು ಮಾವನ ರೂಮಿನಲ್ಲಿದ್ದ ಆ ಸಂಗ್ರಹವನ್ನು ನೋಡುತ್ತಿದ್ದ ಅವಳಿಗೆ ಅಣ್ಣಾವ್ರ ಎರಡು ಕನಸು ಚಿತ್ರದ ಸಿ.ಡಿ. ಸಿಗಬೇಕೇ! ಅದು ಅವಳ ಅಚ್ಚು ಮೆಚ್ಚಿನ ಮೆಚ್ಚಿನ ಚಿತ್ರ ಈಗಾಲೇ ಎರಡು ಮೂರು ಸಲ ನೋಡಿದ್ದರೂ ಕಡೇ ಸರಿ ನೋಡಿ ಒಂದು ವರ್ಷದ ಮೇಲಾದ್ದರಿಂದ ಆ ಸಿ.ಡಿ. ಹಾಕಿಕೊಂಡು ನೋಡಲು ಕುಳಿತಳು. ಡಾ. ರಾಜ್ ಅಭಿನಯ, ಮಂಜುಳಾಳ ಮುಗ್ಧ ಸೌಂದರ್ಯ ಎಲ್ಲಾ ಮೇಳೈಸಿದಂತಿದ್ದ ಆ ಸಿನಿಮಾದಲ್ಲೇ ಅವಳು ತಲ್ಲೀನಳಾಗಿದ್ದಾಗಲೇ 'ಎಂದೆಂದೂ ನಿನ್ನೆನು ಮರೆತು'... ಎಂಬ ಹಾಡು ಬಂದಿತು, ವಾಹ್, ಆ ನದಿ, ಸುಂದರವಾದ ತಾಣ ಅದ್ಭುತವಾದ ಹಿನ್ನಲೆ ಸಂಗೀತ ಎಲ್ಲಾ ಕೇಳುತ್ತಾ ತನ್ನನ್ನು ತಾನೇ ಮೈ ಮರೆತಿದ್ದ ಅವಳಿಗೆ ತನ್ನ ಬಳಿ ಬಂದು ನಿಂತ ವಿಕಾಸನ ಬಗ್ಗೆ ತಿಳಿಯಲೇ ಇಲ್ಲ. ಅದು ಗಮನಕ್ಕೆ ಬಂದ ಕೂಡಲೇ ಅವನ ಕೈ ಹಿಡಿದು "ಅಲ್ಲಿ ನೋಡು ವಿಕಾಸ್ ಎಷ್ಟು ಚೆನ್ನಾಗಿದೆ ಅಲ್ವಾ ಹಾಡು ಆಹಾ ಆ ಮರದ ಮೇಲಿಂದ ಅವರಿಬ್ಬರ ಮೇಲೆ ಬೀಳೋ ಆ ಹೂವ ರಾಶಿ ನೋಡೋಕ್ಕೆ ಎರಡು ಕಣ್ಣು ಸಾಲದು ಅಲ್ವ" ಎಂದಳು. ಅದಕ್ಕೆ ಅವನು ಕೂಡಲೇ ಪಕ ಪಕನೇ ನಕ್ಕು "ಅಯ್ಯೋ ಹುಚ್ಚಿ ಅದೇನು ನಿಜವಾದ್ದು ಅಂದುಕೊಂಡ್ಯ ಮೊದಲೇ ಮರದ ಮೇಲೆ ಹೂ ರಾಶಿ ಹಾಕಿಟ್ಟಿರ್ತಾರೆ ಆಕ್ಷನ್ ಅಂದ ಕೂಡಲೇ ಬೀಳ್ತಾರೆ ಅಷ್ಟೇ ಅದಕ್ಯಾಕ್ಕೆ ಎಷ್ಟೊಂದು ಖುಷಿ ಪಡ್ತಿದಿಯಾ ಅಲ್ಲದೆ ಇಷ್ಟೊಂದು ಹಳೆ ಮೂವಿ ಎಲ್ಲಾ ನೋಡೋ ಬದ್ಲು ಇಬ್ಬರು ಹೊರಗೆ ಓಡಾಡಿಕೊಂಡು ಬರೋಣ ಬಾ" ಎಂದ. ಅವನ ಮಾತು ಪ್ರತಿಕ್ರಿಯೆ ಅವಳಿಗೆ ಪಾಯಸ ಕುಡಿಯುವಾಗ ನೊಣ ಬಿದ್ದಂತಾಯಿತು, ಬೇಡ ಎಂದರೂ ಇಂತಹುದೇ ಚರ್ಚೆ ಅವಿನಾಶ್‌ನೊಂದಿಗೆ ಮಾಡುವಾಗ ಅವನು ವಿಶದಲ್ಲಿ ತಾನೊಂದಿಗೆ ಮತ್ತಷ್ಟು ರಂಗು ಬೆರಿಸಿ ತನ್ನ ಸಂತೋಷ ಉತ್ಸಾಹ ಇಮ್ಮಡಿ



ಮಾಡುತ್ತಿದ್ದುದು ನೆನಪಿಗೆ ಬಂತು. ಹುಂ ಈ ವಿಕಾಸನೋ ಮೂರು ಹೊತ್ತು ಶಾಪಿಂಗ್ ಸುತ್ತಾಟ ಅನ್ನುತ್ತಾನೆ. ಏನಿದೆ ವಿಶೇಷ ಅದರಲ್ಲಿ ಹತ್ತು ಅಂಗಡಿ ಸುತ್ತಿ ಒಂದೋ ಎರಡೂ ಡ್ರೆಸ್ ಖರೀದಿಸಿ ಪಿಜ್ಜಾ ವೊ ಬರ್ಗರ್ ತಿಂದು ಬರುವುದಷ್ಟೇ. ಆದರೂ ಅವನಿಗೆ ಬೇಸರ ಆಗಬಾರದೆಂದು ಏನೂ ಹೇಳದೆ ಟಿವಿ ಆಫ್ ಮಾಡಿ ಅವನೊಂದಿಗೆ ಹೊರ ಹೊರಟಳು. ಆದರೆ ಅವಳ ಮನಸ್ಸೇಕೋ ಅವನ ಮಾತಿನಿಂದ ಘಾಸಿಯಾಗಿತ್ತು.

ಅಂದು ಸಂಜೆ ಪ್ಯಾಕಿಂಗ್ ಎಲ್ಲಾ ಮುಗಿಸಿ, ಮಾರನೇ ದಿನ ಹೊರಡಲು ಸಂಪೂರ್ಣವಾಗಿ ಇದ್ದ ಅವಳು ತಾನು ತಂದಿದ್ದ ಕಾದಂಬರಿಯೊಂದನ್ನು ಹಿಡಿದು ಓದುತ್ತ ಕುಳಿತವಳು ಅದರಲ್ಲೇ ಗಾಢವಾಗಿ ಮುಳುಗಿ ಹೋದಳು. ಇವಳೊಂದಿಗೆ ಮದುವೆಯ ಬಗ್ಗೆ ಇವಳ ಅಭಿಪ್ರಾಯ ಕೇಳುವ ಇರಾದೆಯಿಂದ ಅಪ್ಪ, ಅಮ್ಮ, ಮಗ ಮೂವರೂ ಇವಳ ರೂಮಿಗೆ ಬಂದರು. ಅವಳ ಕೈಲಿದ್ದ ಪುಸ್ತಕ ನೋಡಿದ ವಿಕಾಸನಿಗೆ ಸ್ವಲ್ಪ ಕಸಿವಿಸಿ ಆಯಿತು. ಮಂಗಳೂರಿನಲ್ಲೂ ಭೇಟಿಯಾದ ಎರಡು ಮೂರು ಬಾರಿ ಪುಸ್ತಕ ಹಿಡಿದೇ ಕೂತಿದ್ದ ಅವಳನ್ನು ನೆನೆಸಿ, ಏನಪ್ಪಾ ಮೂರೂ ಹೊತ್ತು ಕಾದಂಬರಿಯೇ ಓದುತ್ತಾಳೆ ಎಂದೆನಿಸಿ, ಸಿಟ್ಟೂ ಬಂದಿತು. ಅಲ್ಲದೆ ತಾವು ರೂಮಿಗೆ ಬಂದುದ್ದನ್ನು ಗಮನಿಸದಷ್ಟು ಗಾಢವಾಗಿ ಪುಸ್ತಕದಲ್ಲಿ ಮುಳುಗಿದ್ದ ಅವಳನ್ನು ಬಾರಿಸಬೇಕೆನಿಸಿತು. ಅದೇ ಸಿಟ್ಟಿನಲ್ಲಿ ಅವಳ ಮುಂದೆ ನಿಂತು ಸ್ವಲ್ಪ ಜೋರಾಗಿಯೇ "ಸಾಗರಿಕ" ಎಂದು ಕಿರುಚಿದ. ಬೆಚ್ಚಿ ಪುಸ್ತಕ ಬದಿಗಿಟ್ಟು ನೋಡಿದ ಅವಳು ಮೂವರನ್ನು ಒಟ್ಟಿಗೆ ಅಲ್ಲಿ ನೋಡಿ ನಿಜಕ್ಕೂ ಗಾಬರಿಯೇ ಆದಳು. ಮಗನನ್ನು ಸುಮ್ಮನಿರುವಂತೆ ಸನ್ನೆ ಮಾಡಿದ ಅವರಮ್ಮ ಅವಳನ್ನು ಪ್ರೀತಿಯಿಂದ ನೋಡಿ ನಕ್ಕು "ಗಾಬರಿಯಾಗ ಬೇಡಮ್ಮ ಹೇಗೂ ನಾಳೆ ಹೊರಡುತ್ತಿದ್ದೀಯಲ್ಲ. ಅದಕ್ಕೆ ಮದುವೆಯ ಬಗ್ಗೆ ಮಾತೋಡೋಣ ಅಂತ ಬಂದೆವು, ನಮಗೆ ಗೊತ್ತು ನಿನಗೆ, ನಾವು, ಈ ಜಾಗ ಎಲ್ಲ ಇಷ್ಟವಾಗಿದೆ ಅಂತ. ಅದಕ್ಕೆ ಇವತ್ತೇ ಸಂಜೆಯೇ ಹೋಗಿ ನಿನಗೆಂತಹ ಆಭರಣಗಳನ್ನು ಬೇಕೋ ಅದನ್ನು ತೆಗೆದುಕೊಳ್ಳೋಣ ಅಂತ, ಮುಂದೆ ಮದುವೆಗೆ ಅಂತ ಆತುರ ಬೀಳೋದು ತಪ್ಪುತ್ತೆ ಏನಂತೀಯಾ" ಎಂದರು. ಅದಕ್ಕೆ ಅವಳ ಉತ್ಸಾಹಕರ ಪ್ರತಿಕ್ರಿಯೆ ನಿರೀಕ್ಷಿಸಿದ್ದ ಅವರಿಗೆಲ್ಲ ಅವಳ ನಿರ್ವಿಕಾರವಾದ ಮುಖ ನೋಡಿ ಆಶ್ಚರ್ಯವಾಯಿತು.

ವಿಕಾಸನಿಗಂತೂ ರೇಗಿತು, ತಡೆಯಲಾರದೆ "ಏನಮ್ಮ ನೀನು ಅವಳನ್ನೇನು ಕೇಳೋದು ಅಲ್ಲೇ ಇಂಡಿಯಾದಲ್ಲೆಲ್ಲೋ ಸಣ್ಣ ಸಿಟಿಯಲ್ಲಿದ್ದ ಅವಳಿಗೆ ಇಲ್ಲಿಯ ಅದ್ದೂರಿಯಾದ ಜೀವನ ಶೈಲಿ, ಝಗ ಝಗಿಸುವ ಸುತ್ತುವ ತಾಣಗಳು ಎಲ್ಲಾ ನೋಡೀ ತಲೆಯೇ ತಿರುಗಿರುತ್ತೆ. ಅವಳ ಅದೃಷ್ಟ ನೆನೆಸಿ ಅವಳು ಮಾತು ಬರದೇ ಹಾಗೆ ನಿಂತಿದ್ದಾಳೆ ನೋಡು" ಎಂದು ವ್ಯಂಗವಾಗಿ ನಕ್ಕು, "ನೋಡು ಸಾಗರಿಕ ಆದರೆ ನಿನಗೆ ನಾನು ಕೆಲವು ಮಾತು ಹೇಳಲೇಬೇಕು. ನಮ್ಮ ಮದುವೆಯಾದ ಮೇಲೆ ನೀನು ಈ ಕಥೆ ಓದುವ ಆ ಹಾಳು ಕನ್ನಡ ಸಿನಿಮಾ ನೋಡುವ, ಹಾಡು ಕೇಳುವ ಅಭ್ಯಾಸ ಎಲ್ಲಾ ಬಿಡಬೇಕು. ಮಾಡರ್ನ್ ಆಗಿದ್ದು ನನ್ನೊಂದಿಗೆ ಶಾಪಿಂಗ್, ಟೂರಿಸ್ಟ್ ಸ್ಪಾಟ್ ಅಂತ ಓಡಾಡಿಕೊಂಡು ಹಾಯಾಗಿರು ಅಷ್ಟೇ" ಎಂದ. ಅದುವರೆಗೂ ಎಲ್ಲಾ ಸಹನೆಯಿಂದ ಕೇಳುತ್ತಿದ್ದ ಸಾಗರಿಕಳಿಗೆ ಕೆಂಡದಂಥ ಸಿಟ್ಟು ಬಂತು, ಅಲ್ಲ ನನ್ನ ಏನೆಂದುಕೊಂಡಿದ್ದಾನೆ ನಾನು ಇಂಜಿನಿಯರಿಂಗ್ ಓದಿ ಕೆಲಸದಲ್ಲಿರುವವಳು. ನೋಡಲು ಚೆನ್ನಾಗಿದ್ದೇನೆ ನನ್ನನ್ನು ಇಷ್ಟೊಂದು ಕೇವಲವಾಗಿ ನೋಡುವುದೇ ಎಂದು ತಾನು ಕೂಡ ಖಡಕ್ಕಾಗಿಯೇ, "ನೋಡು ವಿಕಾಸ್ ನೀನೆಂದಂತೆ ಈ ಜಾಗಗಳು, ನಿನ್ನೊಂದಿಗೆ ಓಡಾಟ ಎಲ್ಲಾ ನನಗೆ ಮೊದ ಮೊದಲಿಗೆ ತುಂಬಾ ಇಷ್ಟವಾಯಿತು, ಎಷ್ಟರ ಮಟ್ಟಿಗೆಂದರೆ ನಾನು ನನ್ನತನವನ್ನೇ ಮರೆಯುವಷ್ಟು ಆದರೆ ಮನೆಯಲ್ಲೇ ಇರಲು ಶುರು ಮಾಡಿದ ಮೇಲೆ ನಿನ್ನ ನಿಜ ಸ್ವಭಾವ ಗೊತ್ತಾಯಿತು. ನಿನಗೆ ನಾನೆಂದರೆ ಒಂದು ಅಂದದ ಹೆಣ್ಣಷ್ಟೇ. ನನ್ನ ಇಷ್ಟಾನಿಷ್ಟಗಳಿಗೆ ನಿನ್ನಲ್ಲಿ ಬೆಲೆಯಿಲ್ಲ. ನೀನು ನನ್ನನ್ನು ಚಿನ್ನದ ಸುಪ್ಪತ್ತಿಗೆಯಲ್ಲಿ ಮಲಗಿಸಿದರೂ ನನಗೆ ಸವಿ ನಿದ್ದೆ ಕೊಡಲಾರೆ, ಇದರಿಂದ ನನಗೆ ಏನೂ ಉಪಯೋಗವಿಲ್ಲ. ನಾನು ಇಲ್ಲಿ ಬರುತ್ತಿದ್ದೇನೆ ಎಂದು ಗೊತ್ತಾದಾಗ ನನ್ನ ಬಾಳು ಬಂಗಾರವಾಗಲಿ ಎಂದು ತನ್ನ ನೋವನ್ನು ಮುಚ್ಚಿಟ್ಟು ಹಾರೈಸಿದ ಅವಿನಾಶ್ ಎಲ್ಲಿ ನನ್ನನ್ನು ನೀನು ಖರೀದಿಸಿದ ವಸ್ತು ಎಂಬಂತೆ ವರ್ತಿಸುತ್ತಿರುವ ನೀನೆಲ್ಲಿ ಹೋಲಿಕೆಯೇ ಇಲ್ಲ. ನಾನು ಎಲ್ಲಿದ್ದರೂ ಚೆನ್ನಾಗಿದ್ದರೆ ಸಾಕು ಎಂದು ಅಷ್ಟೇ ಬಯಸುವ ಅವನ ಮುಂದೆ ನನ್ನ ಆಸೆ ಆಕಾಂಕ್ಷೆಗಳನ್ನು ಕಸಕ್ಕಿಂತ ಕಡೆಯಾಗಿ ಕಾಣುತ್ತಿರುವ ನೀನು ಬಹಳ ಸಣ್ಣವನಾದೆ. ಸಾರಿ ವಿಕಾಸ್ ನನ್ನ ಆಯ್ಕೆ ಅವಿನಾಶ್, ನೀನಲ್ಲ" ಎಂದಳು.

ಇದೆಲ್ಲ ಕೇಳಿ ನಖಶಿಖಾಂತ ಉರಿದುಕೊಂಡ ವಿಕಾಸ್ "ಹೋಗೆ ಅವನ ಹತ್ತಿರ ಹೋಗೆ ಅವನೇ ನಿನಗೆ ಸರಿ ನನ್ನಂಥ ಹ್ಯಾಂಡ್ಸಮ್ ಹುಡುಗನಿಗೆ ನೀನು ಏನೇನೂ ತಕ್ಕವಳಲ್ಲ ಏನೋ ಒಂದಷ್ಟು ಚೆನ್ನಾಗಿದ್ದೀಯ ಮತ್ತು ಹತ್ತಿರದ ಸಂಬಂಧದವಳೆಂದು ಅಮ್ಮ ಬಲವಂತ ಮಾಡಿದರಿಂದ ನಿನ್ನ ಹಿಂದೆ ಬಂದೆ ಅಷ್ಟೇ. ನನಗೇನು ನಿನಗಿಂತಲೂ ಚೆನ್ನಾಗಿರುವವರು ಇಲ್ಲೇ ದುಬೈ ಅಲ್ಲೇ ಸಿಗುತ್ತಾರೆ" ಎಂದು ಸಿಡುಕಿ ಹೊರಟವನನ್ನು ಚಪ್ಪಾಳೆ ತಟ್ಟಿ ನಿಲ್ಲಿಸಿದ ಸಾಗರಿಕ, "ನೋಡು ವಿಕಾಸ್ ಅದು ನಿನ್ನ ಬದುಕು ನಿನಗೆ ಸರಿ ಕಂಡ ಹಾಗೆ ಮಾಡು, ಆದರೆ ನಾನು ನಿನ್ನನ್ನು ನಿಲ್ಲಿಸಿದ್ದು ಥ್ಯಾಂಕ್ಸ್ ಹೇಳುವುದಕ್ಕೆ" ಎಂದಳು. "ಏಕೆ" ಅಂದು ಹುಬ್ಬೇರಿಸಿದ ಅವನತ್ತ ಅಲಕ್ಷ್ಯವಾಗಿ ನೋಡಿದ ಅವಳು, "ನಾನು ಎದುರಿಗಿದ್ದ ಮಾಣಿಕ್ಯದ ಬೆಲೆಯನ್ನು ಅರಿಯದೆ ಕುರುಡಾಗಿದ್ದೆ, ನನ್ನ ಮುಂದೆ ಝಗ ಝಗಿಸುತ್ತ ಬಂದ ನೀನು ಕೃತಕವಾದ ಮುತ್ತೆಂದು ಬೇಗನೆ ನನಗೆ ತೋರಿಸಿ ನನ್ನ ಮಾಣಿಕ್ಯ ನನಗೆ ಉಳಿಯುವಂತೆ ಮಾಡಿದೆ ಈ ಉಪಕಾರ ನಾನು ಮರೆಯಲಾರೆ" ಎಂದಳು. ಈ ಮಾತನ್ನು ಕೇಳಿ ಮತ್ತಷ್ಟ ಕೆರಳಿದ ವಿಕಾಸ್ ದುರ್ದಾನ ತೆಗೆದುಕೊಂಡವನಂತೆ ಅವಳ ಮುಖ ನೋಡದೆ ಡಬಾರ್ ಎಂದು ಬಾಗಿಲು ಎಳೆದುಕೊಂಡು ಹೊರಟು ಹೋದ. ಸಮಚಿತ್ತರಾದ ಅವನ ತಂದೆಯೇ ಅವಳನ್ನು ಸಮಾಧಾನಪಡಿಸಿ ಅವಳನ್ನು ಕ್ಷೇಮವಾಗಿ ಅಲ್ಲಿಂದ ಭಾರತದ ಫ್ಲೈಟ್ ಹತ್ತಿಸಿದರು.

**ನಾಲ್ಕು**

ಯಾವಾಗ ಮಂಗಳೂರು ಸೇರುವನೋ ಅವಿನಾಶನನ್ನು ಯಾವಾಗ ಕಾಣುವೇನೋ ಎಂದು ಒಂದೇ ಸಮನೆ ಜಪ ಮಾಡುತ್ತಾ ಬಂದ ಅವಳು ಮಂಗಳೂರು ತಲುಪಿ ಮನೆಯೊಳಗೆ ಕಾಲಿಡುತ್ತಿದಂತೆಯೇ ಅವಳನ್ನು ವಿಚಾರಿಸಿದ ಅವಳಮ್ಮನಿಗೆ ಸಂಕ್ಷಿಪ್ತಾಗಿ ಉತ್ತರ ಕೊಟ್ಟು ಅವಸರವಸರವಾಗಿ ಮುಖ ತೊಳೆದು ಸರಳವಾಗಿ ಅಲಂಕರಿಸಿಕೊಂಡು, ಅವಿನಾಶನಿಗಿಷ್ಟವಾದ ನಿಂಬೆ ಬಣ್ಣದ ಚೂಡಿದಾರ್ ಧರಿಸಿ ತನ್ನ ಸ್ಕೂಟರ್ ಹತ್ತಿ ಅವನ ಮನೆಗೆ ಹೊರಟೇ ಬಿಟ್ಟಳು. ಏನೇ ಈಗ ತಾನೇ ಬಂದೆ ಏಕೆ ಇಷ್ಟೊಂದು ಆತುರ ನಾಳೆ ಹೋದರಾಗದೆ ಎಂದ ಅಮ್ಮನ ಮಾತಿಗೆ, ನನ್ನ ತಡೆಯಬೇಡಮ್ಮ ಅವಿನಾಶ್ ಮನೆಗೆ ಹೋಗುತ್ತಿದ್ದೇನೆ ವಾಪಸ್ಸು ಬಂದು ಎಲ್ಲ ಹೇಳುತ್ತೇನೆ ಎಂದಷ್ಟೇ ಹೇಳಿದಳು.

ಅವಿನಾಶ್ ಮನೆ ಸೇರಿದ ಸಾಗರಿಕ ಅವನಮ್ಮ ವನಜಳನ್ನು ಮಾತನಾಡಿಸಿ "ಅವಿನಾಶ್ ಎಲ್ಲಿ ಅತ್ತೆ" ಎಂದು ಕೇಳಿದಳು "ಅಯ್ಯೋ ಅವನಿಗೂ ನೀನು ಬರುವ ಸುದ್ದಿ ಗೊತ್ತಾಗಿ ನಿನಗಿಷ್ಟವಾದ ಕೆಲವು ತಿಂಡಿ ತರಲು ಮಾರ್ಕೆಟ್‌ಗೆ ಹೋಗಿದ್ದಾನೆ ಇನ್ನೇನು ಬರಬಹುದು" ಎಂದರು. ಆ ಮಾತೆ ಅವಳಿಗೆ ಅಪ್ಯಾಯಮಾನವೆನಿಸಿತು, ಹುಂ ನಾನು ಅವನನ್ನು ಒಪ್ಪಲಿ ಬಿಡಲಿ ಅವನಿಗೆ ನನ್ನ ಮೇಲೆ ಎಷ್ಟೊಂದು ಪ್ರೀತಿ ಇದೆ ಇಂತವನನ್ನು ಬಿಟ್ಟು ಆ ವಿಕಾಸ್ ಹಿಂದೆ ಹೋಗಿದ್ದೆನಲ್ಲ ಎಂದು ತನ್ನನ್ನು ತಾನೇ ಹಳಿದುಕೊಂಡಳು. ರೂಮಿನಲ್ಲಿ ಅವನಿಗೆ ಕಾಯುತ್ತ ಕುಳಿತಿದ್ದ ಅವಳಿಗೆ ಎಫ್. ಎಂ. ರೇಡಿಯೋದಲ್ಲಿ ಬರುತ್ತಿದ್ದ ಮಾಂಗಲ್ಯ ಬಾಗ್ಯ ಸಿನಿಮಾದ "ಆಸೆಯ ಭಾವ ಒಲವಿನ ಜೀವ ಒಂದಾಗಿ ಬಂದಿದೆ" ಎಂಬ ಹಾಡು ಎಂದಿಗಿಂತ ಹೆಚ್ಚಾಗೇ ಇಂಪಾಗಿ ಕೇಳಿ ಅವಿನಾಶನ ನೆನಪು ಬಂದು ಮನಸ್ಸು ಅರಳಿತು. ಕೆಲವೇ ನಿಮಿಷದಲ್ಲಿ ಮನೆಗೆ ಬಂದ ಅವಿನಾಶ್‌ಗೆ ಹೊರಗಡೆ ನಿಂತಿದ್ದ ಅವಳ ಸ್ಕೂಟರ್ ನೋಡಿದೊಡನೆ ಹೃದಯ ಬಡಿತ ಏರಿತು. ಆದರೂ ಮೂಲೆಯಲ್ಲೆಲ್ಲೋ ಈಗ ಅವಳು ಮತ್ತೊಬ್ಬನಿಗೆ ಸೇರಿದವಳು ಎಂಬ ಭಾವ ನಿರಾಶೆ ಮೂಡಿಸಿತು. ಆದರೂ ಅದನ್ನು ತೋರಿಸದೆ ಅವಳನ್ನು ನೋಡಿದಾಕ್ಷಣ "ಓಹೋ ಏನು ಅಮ್ಮಾವ್ರು ಇಲ್ಲಿಯ ಭೂ ಸ್ಪರ್ಶವಾಗುತ್ತಿದಂತೆ ಬಡವನ ನೆನಪಾಗಿದೆ" ಎಂದು ಛೇಡಿಸಿದ ಅವಳು ಬಿಡದೆ "ಹೌದು ಮತ್ತೆ ವಿಕಾಸ್‌ನೊಂದಿಗೆ ಅಲ್ಲಿ ತಿರುಗಾಡಿದ್ದು, ಮಜಾ ಮಾಡಿದ್ದೂ ಅಲ್ಲಿನ ವೈಭವ ಎಲ್ಲಾ ನಿನ್ನ ಬಿಟ್ಟರೆ ಬೇರೆ ಯಾರ ಹತ್ತಿರ ಹೇಳಲು ಸರಿ ಅನ್ನಿಸಲಿಲ್ಲ. ಅದಕ್ಕೆ ಮೊದಲಿಗೆ ನಿನಗೆ ಹೇಳೋಣ ಅಂತ ಬಂದೆ" ಎಂದು ಹೇಳಿ ಓರೇ ಕಣ್ಣಿನಿಂದ ಅವನ ಮುಖ ನೋಡಿದಳು. ಈ ಮಾತು ಕೇಳುತ್ತಲೇ ನಿಧಾನವಾಗಿ ನಿಸ್ತೇಜವಾಗುತ್ತಿದ್ದ ಅವನ ಮುಖ ಗಮನಿಸಿದ ಅವಳು ಆಸಾಮಿ ಇನ್ನು ಮತ್ತೆ ಕಣ್ಣಿನಿಂದ ಬಳ ಬಳ ನೀರು ಸುರಿಸಿಯಾನು ಎಂದೆಣಿಸಿ ಅವನ ಮುಖದ ಮುಂದೆ ಒಂದು ಚೀಟಿಗೆ ಹೊಡೆದು ನಕ್ಕು "ಓಹೋ ಸಾಹೇಬರೇ ಇನ್ನು ಕಳೆದು ಹೋಗಬೇಡಿ ನಾನು ಅದನ್ನೆಲ್ಲ ಹೇಳಲು ಬಂದಿದ್ದು ಬೇರೆಯೇ ಕಥೆ ಇದೆ ಹೇಳಲು" ಎಂದಳು. "ಹೌದಾ ಏನಾಯ್ತು" ಎಂದಾಗ ಅಲ್ಲಿ ನಡೆದಿದ್ದನೆಲ್ಲ ಹೇಳಲಾರಂಭಿಸಿದ ಅವಳಿಗೆ ಕಡೆ ಕಡೆಗೆ ತನಗೆ ವಿಕಾಸ್ ಅವಮಾನ ಮಾಡಿದ್ದೂ ಎಲ್ಲಾ ಹೇಳುವಾಗ ಅಳುವೇ

ಬಂದಿತು. ತಡೆಯಲಾರದೆ ಅವನ ಹೆಗಲಿಗೊರಗಿದ ಅವಳು ಭೋರ್ಗರೆದು ಅತ್ತು ಸಮಾಧಾನ ಮಾಡಿಕೊಂಡಳು.ಅವಳ ಎದೆಯಲ್ಲಿ ಹೆಪ್ಪು ಗಟ್ಟಿದ್ದ ನೋವೆಲ್ಲಾ ಹೊರಬಂದಂತಾಗಿತ್ತು. ತನ್ನ ಒದ್ದೆಯಾಗಿದ್ದ ಶರ್ಟ್ ನೋಡಿಕೊಂಡ ಅವಿನಾಶ್, "ಮೇಡಂ ಇನ್ನು ಸ್ವಲ್ಪ ಹೊತ್ತು ಹೀಗೆ ನೀವು ಅತ್ತರೆ ನನ್ನ ಶರ್ಟ್ ಒಗೆಯುವುದೇ ಬೇಡ ನಿಮ್ಮ ಕಣ್ಣೀರಿನಿಂದಲೇ ಕ್ಲೀನ್ ಆಗಬಹುದು" ಎಂದ ಕೂಡಲೇ ಎಚ್ಚೆತ್ತು ಕಣ್ಣೊರೆಸಿಕೊಂಡು ಅವನ ಮಾತಿಗೆ ನಕ್ಕ ಅವಳನ್ನು ಸಮಾಧಾನಿಸಿದ ಅವನು ಅವಳನ್ನು ಕರೆತಂದು ತೂಗು ಮಣೆಯಲ್ಲಿ ಕೂಡಿಸಿ ತಾನು ಅವಳ ತೊಡೆಮೇಲೆ ಕೈ ಇಟ್ಟು ಕುಳಿತು ಕೇಳಿದ, "ಹೇಳು ಸಾಗರಿಕ ನಿನ್ನ ನಿರ್ಧಾರ ಏನು ಮಾಡಿದೆ, ಎಷ್ಟೆಲ್ಲಾ ಆದರೂ ವಿಕಾಸ್ ಬೇಕೆಂದ್ದಿದ್ದಿಯೋ ಅಥವಾ ......" ಅವನ ಮಾತನ್ನು ತುಂಡರಿಸಿದ ಅವಳು ಅವನನ್ನು ರೇಗಿಸೋಣ ಎಂದುಕೊಂಡು "ಹಾಂ ಎಷ್ಟೆಲ್ಲಾ ಆದರೂ ಅಲ್ಲಿನ ಲೈಫ್ ಸ್ಟೈಲ್ ಎಲ್ಲಾ ಬಿಡೋಕಾಗುತ್ತ ಹೇಳು ಅವಿ ಅದಕ್ಕೆ... ಅದಕ್ಕೆ.... ನಾನು...." ಎಂದು ಅವನ ಮುಖ ನೋಡಿದಾಗ ಅವನು ಇನ್ನೇನು ಅಲ್ಲೇ ಕುಸಿದು ಹೋಗುವವನಂತೆ ಕೂಡಲೇ ನಕ್ಕ ಅವಳು ಅವನ ಎರಡು ಕೈ ಹಿಡಿದು ಅವನ ಕಣ್ಣಲ್ಲೇ ನೋಡುತ್ತಾ "ಇಲ್ಲ ಮಾರಾಯ ಕಡೆಗೆ ನನಗೆನಿಸಿದ್ದು ನನ್ನ ಬದುಕಿನ ಗುರಿ ಅವನಲ್ಲ ನೀನು ಎಂದು. ನನ್ನ ಮನಸ್ಸಿನ ಒಂದೊಂದು ಮಿಡಿತವನ್ನು ಅರಿಯಬಲ್ಲ ನೀನೇ ನನ್ನ ಬಾಳಿನ ಜತೆಗಾರ, ಈಗ ಸಮಾಧಾನವೇ?" ಎಂದು ಅವನ ಉದ್ದನೆಯ ಮೂಗು ಹಿಡಿದೆಳದಳು. ಅವಳ ಮಾತು ಮುಗಿಯುತ್ತಿದಂತೆ ಉತ್ಸಾಹದಿಂದ ರೊಯ್ಯನೆ ಎದ್ದ ಅವನು ಅವಳು ಕಿರುಚಿದರು ಬಿಡದೆ ಅವಳನ್ನು ಎರಡು ಕೈಯಲ್ಲಿ ಎತ್ತಿ ಹಿಡಿದು ಮೂರು ರೌಂಡ್ ತಿರುಗಿಸಿದ. ಇವರ ಗದ್ದಲ ಕೇಳಿ ಹೊರ ಬಂದ ವನಜ ಮಗನ ಮತ್ತು ಅವಳ ಅವಸ್ಥೆ ಕಂಡು ತಾವು ನಕ್ಕು, ಸಾಕು ಅವಳನ್ನು ಮೆತ್ತಗೆ ಕೆಳಗಿಳಿಸೋ ಅವಳ ಸೊಂಟ ಏನಾದ್ರೂ ಮುರಿದು ಬಿಟ್ಟೀಯಾ ಎಂದು ಗದರಿದರು. ಅವಳನ್ನು ಜಾಗೃತೆಯಾಗಿ ಕೆಳಗಿಸಿರಿದ ಅವನು ಅವಳ ಕಿವಿಯ ಬಳಿ ಬಗ್ಗಿ ಬರೀ ಅವಳಿಗೆ ಕೇಳುಸಿವಂತೆ, ಹೌದಲ್ಲ ನಿನ್ನ ಸೊಂಟ ಈಗಲೇ ಮುರಿದರೆ ಹೇಗೆ ಅದಕ್ಕೆ ಇನ್ನು ಮದುವೆಯಾದ ಮೇಲೆ ಸಮಯವಿದೆಯಲ್ಲ ಎಂದು ಕಣ್ಣು ಹೊಡೆದು ಛೇಡಿಸಿದ. ಈ ಮಾತು ಕೇಳಿ ಮುಖಕೆಲ್ಲಾ ರಕ್ತ ನುಗ್ಗಿದಂತೆ ಕೆಂಪು ಕೆಂಪಾದ ಸಾಗರಿಕ ನಾಚಿದಂತೆ ಮಾಡಿ ಅವನ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಾ.. ನೋಡುತ್ತಾ.... ಅವನಿಗೆ ಗೊತ್ತಾಗದಂತೆ ತನ್ನ ಕೈಯನ್ನು ಅವನ ಹಿಂದಿನಿಂದ ತಂದು ಅವನ ಸೊಂಟವನ್ನು ಬಲವಾಗಿ ಚಿವುಟಿದಳು. ಗದ್ದೆಯಲ್ಲಿರುವಾಗ ಅಂಗಿಯಲ್ಲಿ ಸೇರಿದ ಯಾವುದೊ ಕೆಂಪಿರುವೆಯೇ ಕಡಿದಿದೆ ಎಂದು ಭಾವಿಸಿದ ಅವಿನಾಶ್ ಹೌಹಾರಿ ನೆಗೆದು ನಿಂತ ಅವನ ಅವಸ್ಥೆ ನೋಡೀ ಅವನಮ್ಮ ಸಾಗರಿಕ ಇಬ್ಬರೂ ಕೇಕೆ ಹಾಕಿ ನಕ್ಕರು. ಇದು ಇವಳದೇ ಕೈವಾಡ ಅಂದು ಗೊತ್ತಾಗಿ ಅವಳ ಕಿವಿ ಹಿಂಡಲು ಹೋದ ಅವನನ್ನು ಅವನಮ್ಮ ತಡೆದು ನಿಲ್ಲಿಸಿದರು. ಅವರನ್ನು ಅತ್ತ ಸರಿಸಿ ಮತ್ತೆ ಅವಳನ್ನು ಹಿಡಿಯುವಷ್ಟರಲ್ಲಿ, ಸಾಗರಿಕ ಜಿಂಕೆಯಂತೆ ಹಾರಿ ಸ್ಕೂಟರ್ ಏರಿ ಮನೆ ಕಡೆ ಹೊರಟಾಗಿತ್ತು. ಈ ಮಧುರ ನೆನಪಿನೊಂದಿಗೆ ಮತ್ತು ಜೊತೆಗೆ ಸಾಗರಿಕ ನನ್ನವಳೇ ಆದಳು ಎಂಬ ಖುಷಿಯಲ್ಲಿ ಶೀಟಿ ಹಾಕುತ್ತ ಮನೆ ಒಳಗೆ ಬಂದ ಅವಿನಾಶನಿಗೆ ಈಒ ರೇಡಿಯೋ ದಿಂದ ಆಗ ತಾನೇ ಶುರುವಾದ ಅಣ್ಣೋರ ಭಾಗ್ಯವಂತರು ಸಿನಿಮಾದ ಹಾಡು "ನಿನ್ನ ನನ್ನ ಮನವು ಸೇರಿತು ನನ್ನ ನಿನ್ನ ಹೃದಯ ಹಾಡಿತು"ಎಂಬ ಹಾಡು ತನಗೆ ಹಾಡಿದಂತೆ ಭಾಸವಾಗಿ ಮತ್ತಷ್ಟು ಖುಷಿಯಾಯಿತು

ಮನೆಯಲ್ಲಿ ವಿಷಯ ತಿಳಿಸಿದ ಸಾಗರಿಕಳ ಇಚ್ಛೆಗೆ ಬೇಡ ಎನ್ನುವವರೂ ಯಾರೂ ಇರಲಿಲ್ಲ. ಮುಂದಿನ ಎರಡು ತಿಂಗಳಲ್ಲಿ ಅವಿನಾಶ್ ಮಡದಿಯಾಗಿ ಅವನ ಮನೆ ಸೇರಿದ ಅವಳು ಅವಳಿಗಿಷ್ಟವಾದ ಅಚ್ಚು ಮೆಚ್ಚಿನ ಜೀವನವನ್ನೇ ಕಳೆದಳು. ಅವಿನಾಶ್ ಕೂಡ ಅಷ್ಟೇ ಅವಳನ್ನು ಕಣ್ಣ ರೆಪ್ಪೆಯಂತೆ ಕಾಳಜಿ ವಹಿಸಿ ನೋಡಿಕೊಂಡು ಅವಳ ಜೀವನದಲ್ಲಿ ಮತ್ತೆಂದೂ ಯಾವ ಗೊಂದಲವೂ ಬರದಂತೆ ಮಾಡಿದ. ವರ್ಷಕ್ಕೆ ಒಂದೋ ಎರಡೂ ಫಾರಿನ್ ಟ್ರಿಪ್ ಮಾಡುತ್ತಿದ್ದ ಅವಳಿಗೆ ಅಲ್ಲೆಲ್ಲಾ ಅವಿನಾಶನೊಂದಿಗೆ ಕೈಯಲಿ ಕೈ ಬೆಸೆದು ನೋಡಿದ್ದೆಲ್ಲದರ ಬಗ್ಗೆ ಬಾಯಿತುಂಬ ಮಾತನಾಡುತ್ತ ಚರ್ಚೆ ಮಾಡುತ್ತಾ ಪರಸ್ಪರ ಛೇಡಿಸುತ್ತ ಓಡಾಡುತ್ತಿದ್ದುದು ಅವಿಸ್ಮರಣೀಯ ಅನುಭವ ನೀಡುತ್ತಿತ್ತು. ಅ

***ಶೈಲೇಂದ್ರ ರಾವ್, ನೋಯ್ಡಾ***


ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

**SAUJANYA**
PRINTING PRESS
A HOUSE OF QUALITY PRINTING

Office :
C-95, Okhla Industrial Area
Phase-I, New Delhi – 110 020

PHONE:
011-40520770
MOBILE:
9811104398,
9811604398

E-MAIL:
saujanyapp2010@gmail.com /
hpgp2006@gmail.com



KADALU
COASTAL CUISINE
SOUTH INDIAN SEA FOOD
/ INDIAN MUGHAL
VEG / NON VEG
FOR DELIVERY : 011-42852016 ,
9773834177 , 9599720577
OFFERS
20% DISCOUNT
on order above ₹999
FREE
DELIVERY AND PACKING FOR
ORDER ABOVE ₹350

Delhi Karnataka Sangha Abhimatha Monthly,
June-2018, Vol. No.28, Issue No.9, Price Rs.1/-
RNI Regn. No. 53405/91, DL-SW-1/4016/16-18
Date of Publication : June 8th / 9th, Posting Date :10th / 11th, Total Pages-16
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022,
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.

Easy Banking at your Fingertips

KBL Mobile Banking




Paying shopping bills, Movie tickets, restaurant bills
Utility bills like electricity bill, mobile bills etc.

Call toll free no. 1800 425 1444 or step into your nearest branch for details

Karnataka Bank
Your Family Bank. Across India.

Regd. & Head Office: Mangaluru - 575 002 CIN - L85110KA1924PLC001128 E-mail: info@ktkbank.com Visit us at: www.karnatakabank.com